ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ಮೇ 2016 ಮಾಸ ಪತ್ರಿಕೆ

ಸಂಪುಟ : 38
ಸಂಚಿಕೆ : 08
ಪುಟ : 12
ಬೆಲೆ : ₹ 10/-

## ಪರಿಸರ ರಕ್ಷಣೆ ನನ್ನ ಹೊಣೆ



ಅಂದಿನ ದಿನಗಳಲ್ಲಿ

ಇಂದಿನ ದಿನಗಳಲ್ಲಿ



3 ಸಂತರು ಹಾಗೂ ಸಾಮಾಜಿಕ ಸಮನ್ವಯ
5 ಪ್ರಾಚೀನ ಭಾರತದಲ್ಲಿನ ಪರಿಸರ ಪ್ರಜ್ಞೆ...
8 ಇನ್ನಾದರೂ ಸುಳ್ಳು ಚರಿತ್ರೆಯ ಕಲಿಕೆ ನಿಲ್ಲಲಿ

# ಸಂಪಾದಕೀಯ

ನಮ್ಮ ದೇಶ ಅನಾದಿ ಕಾಲದಿಂದಲೂ ಧರ್ಮ, ನ್ಯಾಯ, ನೀತಿ, ಮೌಲ್ಯಗಳಿಗೆ ಹೆಸರಾದುದು. ನಮ್ಮ ಋಷಿಗಳು, ದಾರ್ಶನಿಕರು, ತತ್ತ್ವಜ್ಞಾನಿಗಳು, ಸಮಾಜ ಸುಧಾರಕರು ಹೀಗೆ ಎಲ್ಲರೂ ತಮ್ಮ ವಿಚಾಧಾರೆಗಳಿಂದ ಭಾರತೀಯ ಸಮಾಜ ಆದರ್ಶಪ್ರಾಯವಾಗುವಂತೆ ಮಾಡುವಲ್ಲಿ ಅಮೂಲ್ಯ ಕಾಣಿಕೆಯನ್ನು ನೀಡಿದ್ದಾರೆ. ಆ ಎಲ್ಲ ಮಹನೀಯರ ಪ್ರಭಾವ ಭಾರತದಲ್ಲಷ್ಟೇ ಅಲ್ಲದೆ ಜಗತ್ತಿನ ಬೇರೆ ರಾಷ್ಟ್ರಗಳ ಮೇಲೂ ತನ್ನ ಛಾಪು ಮೂಡಿಸಿದೆ. ಶಂಕರಾಚಾರ್ಯರು, ರಾಮಾನುಜರು, ಬುದ್ಧ, ಸ್ವಾಮಿ ವಿವೇಕಾನಂದರು, ಮುಂತಾದವರ ವಿಚಾರ ಧಾರೆಗಳು ಜಗತ್ತಿನಾದ್ಯಂತ ಎಲ್ಲರ ಮನಸ್ಸನ್ನು ಸೆಳೆದಿರುವುದು ಸರ್ವ ವಿದಿತ. ಈ ಎಲ್ಲ ಜಗದ್ವಂದ್ಯ ಮಹನೀಯರ ಉದಾತ್ತ ಆಲೋಚನೆಗಳಿಂದಾಗಿ ನಮ್ಮ ದೇಶ ಮೌಲ್ಯಯುತ ಸಮಾಜವಾಗಿ ಇತರ ದೇಶಗಳಿಗೆ ಆದರ್ಶಪ್ರಾಯವಾದ ಗುಣಗಳಿಂದ ಶೋಭಿಸುತ್ತಿದ್ದುದು ಎಲ್ಲರಿಗೂ ತಿಳಿದ ಸಂಗತಿಯೇ ಸರಿ. ಆದರೆ ಈಗ ಆಗಿರುವುದೇನು? ಸ್ವಾತಂತ್ರ್ಯಾನಂತರ ನಮ್ಮ ಸಮಾಜದಲ್ಲಿ ನಾವು ಕಾಣುತ್ತಿರುವುದೇನು? ಮೋಸ, ಕಪಟ, ವಂಚನೆ, ದ್ರೋಹ.

ದೇಶದಲ್ಲಿ ಕೈಗೊಳ್ಳುವ ಯಾವುದೇ ಯೋಜನೆಯಾಗಲಿ. ಅದು ಸಣ್ಣದಾಗಿರಬಹುದು ಅಥವಾ ಬೃಹತ್ ಯೋಜನೆಗಳಾಗಿರಬಹುದು. ಎಲ್ಲದರಲ್ಲೂ ಸಮಾಜಕ್ಕೆ ವಂಚಿಸಿ ತಾವು ಲಾಭ ಮಾಡಿಕೊಳ್ಳುವ ಮನೋಭಾವವೇ ಬಹುಪಾಲು ಜನರಲ್ಲಿ ತುಂಬಿತುಳುಕಾಡುತ್ತಿದೆ. ಯೋಜನೆಯ ಸಿಂಹಪಾಲು ಲಾಭ ತಮ್ಮದಾಗಿಸಿಕೊಳ್ಳಲು ಎಲ್ಲಾ ಅಪಮಾರ್ಗಗಳನ್ನು ಹಿಡಿಯುವ ಪ್ರವೃತ್ತಿ. ಎಲ್ಲೋ ಅಲ್ಪ ಸ್ವಲ್ಪ ಮಾತ್ರ ಸಮಾಜಕ್ಕೆ, ಸರ್ಕಾರಕ್ಕೆ. ಹೀಗಿರುವಾಗ ಸಮಾಜ ಸುಖಿಯಾಗಿರುವುದು ಹೇಗೆ? ಏಕೆ ಹೀಗಾಯಿತು? ಸತ್ಯ ನಿಷ್ಠೆ, ಪ್ರಾಮಾಣಿಕತೆಗಳ, ನೆಲೆಯಾಗಿದ್ದ ಇಲ್ಲಿ ತದ್ವಿರುದ್ಧವಾದ ಗುಣಗಳು ಜನರಲ್ಲಿ ಮನೆಮಾಡಲು ಕಾರಣವೇನು? ಸ್ವಾರ್ಥ ಬುದ್ಧಿ ಜನರಲ್ಲಿ ಅಗಾಧವಾಗಿ ಏಕೆ ಮನೆಮಾಡಿದೆ? ಈ ಎಲ್ಲಾ ನಕಾರಾತ್ಮಕ ಮೌಲ್ಯಗಳಿಂದ ಮುಕ್ತಿ ಯಾವಾಗ? ಹೇಗೆ? ಎಂಬೆಲ್ಲಾ ಪ್ರಶ್ನೆಗಳು ಕಾಡುತ್ತದೆ. ಬಹುಶಃ ಈ ಪ್ರಶ್ನೆಗಳು ಪ್ರಶ್ನೆಯಾಗಿಯೇ ಉಳಿಯುತ್ತದೇನೋ? ಇತಿಹಾಸ ಪುನರಾವರ್ತಿಸುತ್ತದೆ ಎಂಬಂತೆ ಮತ್ತೆ ಹಿಂದಿನ ಆ ಮೌಲ್ಯಯುತ ಸಮಾಜವನ್ನು ಆದಷ್ಟು ಬೇಗ ನಾವು ಪಡೆಯುವ ನಿರೀಕ್ಷೆಯಲ್ಲಿ ಆಶಾದಾಯಕರಾಗೋಣ.

ಒಂದು ಸಮಾಜದ ಬೆಳವಣಿಗೆಯಲ್ಲಿ ಸಂಸ್ಕೃತಿಯ ಜೊತೆಜೊತೆಗೇ ಸಾಹಿತ್ಯ, ಸಂಗೀತವೂ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಕನ್ನಡ ಸಾಹಿತ್ಯವು ದೇಶದ ಬೇರೆ ಭಾಷೆ, ಸಾಹಿತ್ಯಗಳ ನಡುವೆ ತನ್ನದೇ ಆದ ವಿಶಿಷ್ಟತೆಯನ್ನು ಹೊಂದಿದೆ. ಆದಿ ಪಂಪನಿಂದ ಹಿಡಿದು ಅನೇಕ ಸಾಹಿತ್ಯ ದಿಗ್ಗಜರು ಕನ್ನಡವನ್ನು ಶ್ರೀಮಂತಗೊಳಿಸಿದ್ದಾರೆ. ಅವರಲ್ಲಿ ಪ್ರಗತಿಶೀಲ ಕೃತಿಗಳನ್ನು –ವಿಶೇಷವಾಗಿ ಕಾದಂಬರಿಗಳನ್ನು–- ರಚಿಸಿ ಕನ್ನಡ ಕಾದಂಬರಿ ಕ್ಷೇತ್ರದಲ್ಲಿ ತಮ್ಮದೇ ಛಾಪನ್ನು ಮೂಡಿಸಿದವರು ಶ್ರೀಅ.ನ. ಕೃಷ್ಣರಾಯರು. ಅವರ ಕಾದಂಬರಿಗಳು ಎಂಥವರನ್ನೂ ಮೈನವಿರೇಳಿಸುವಂತಹುದು. ಕಾದಂಬರಿ ಲೋಕದ ಧೃವತಾರೆಯಾದ ಅ.ನ.ಕೃ. ಜನಿಸಿದ್ದು 1908 ಮೇ 9ರಂದು. ಜನ್ಮ ದಿನ ಸಂದರ್ಭದಲ್ಲಿ ಅವರ ಕೃತಿಗಳನ್ನು ಓದುವ ಮೂಲಕ ಅವರಿಗೆ ಗೌರವವನ್ನು ಸಲ್ಲಿಸೋಣ.

ಸಂಶೋಧನಾ ಕ್ಷೇತ್ರದಲ್ಲಿ ಸುಮಾರು 5-6 ದಶಕಗಳಿಂದ ತಮ್ಮನ್ನು ತೊಡಗಿಸಿಕೊಂಡು ನಾಡಿನ ಹಿರಿಯ ಸಂಶೋಧಕರಾಗಿ ಖ್ಯಾತರಾಗಿರುವವರು ಡಾ॥ ಎಂ. ಚಿದಾನಂದಮೂರ್ತಿಯವರು. ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದಲ್ಲಿ ಸುಮಾರು 3 ದಶಕಗಳ ಕಾಲ ಪ್ರಾಧ್ಯಾಪಕರಾಗಿ ನೂರಾರು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಿರುವುದಲ್ಲದೆ ಹಲವಾರು ಸಂಶೋಧನಾತ್ಮಕ ಲೇಖನಗಳು, ಕೃತಿಗಳನ್ನು ರಚಿಸಿ ಹಲವಾರು ಐತಿಹಾಸಿಕ ಸತ್ಯಗಳನ್ನು ಸಮಾಜಕ್ಕೆ ಬಿಚ್ಚಿಟ್ಟಿದ್ದಾರೆ. ವಿದ್ಯಾರ್ಥಿಗಳ ಪ್ರೀತಿಯ ಮೇಷ್ಟ್ರರಾದ ಡಾ॥ ಚಿ.ಮೂ.ರವರು ಸಂಶೋಧನೆಗೆ ಮಾತ್ರ ತಮ್ಮ ಕಾರ್ಯ ಕ್ಷೇತ್ರವನ್ನು ಸೀಮಿತಗೊಳಿಸದೆ ಕನ್ನಡ ಶಕ್ತಿ ಕೇಂದ್ರದ ಮೂಲಕ ಜನರಲ್ಲಿ ಕನ್ನಡಾಭಿಮಾನವನ್ನು ಮೂಡಿಸಿ, ಕನ್ನಡವನ್ನು ಕಟ್ಟಿ ಬೆಳೆಸುವ ಕೆಲಸದಲ್ಲಿ ತಮ್ಮನ್ನು ತೊಡಗಿಸಿಕೊಂಡು ಜನಜಾಗೃತಿಯನ್ನು ಮಾಡುತ್ತಾ ಬಂದಿರುವವರು. 1931ರ ಮೇ 10ರಂದು ಜನಿಸಿದ ಡಾ॥ ಚಿದಾನಂದ ಮೂರ್ತಿಗಳಿಗೆ ಈಗ 85ರ ಹರೆಯ. ಅವರ ಉತ್ಸಾಹ ಈಗಲೂ 25ರ ಯುವಕರಂತೆ ಎಂದರೆ ಅತಿಶಯೋಕ್ತಿಯಲ್ಲ. ಹುಟ್ಟುಹಬ್ಬದ ಸಂದರ್ಭದಲ್ಲಿ ಅವರಿಗೆ ನಮ್ಮ ನಮನಗಳು ಹಾಗೂ ಶುಭಾಕಾಂಕ್ಷೆಗಳು.

ಪರಿಸರ ಸಂರಕ್ಷಣೆ ಎಲ್ಲೆಲ್ಲೂ ಕೇಳಿಬರುವ ಸಂಗತಿ. ಪರಿಸರವನ್ನು ನಮ್ಮ ಪೂರ್ವಜರು ಹೇಗೆ ಬಳಸುತ್ತಿದ್ದರು? ಸಂರಕ್ಷಿಸುತ್ತಿದ್ದರು? ಈ ಬಗ್ಗೆ ಲೇಖನವನ್ನು ಈ ಸಂಚಿಕೆಯಲ್ಲಿ ಪ್ರಕಟಿಸಲಾಗುತ್ತಿದೆ. ಪರಿಸರದ ಕಾಳಜಿ ಎಲ್ಲರಲ್ಲೂ ಬೆಳೆಯಲಿ ಎಂಬ ಆಶಯ ನಮ್ಮದು. ಪರಿಸರವನ್ನು ರಕ್ಷಿಸಿ ನೆಮ್ಮದಿಯಿಂದ ಬಾಳೋಣ.

ಸಂಪಾದಕರು

## ಸೂಕ್ತಿ



ಏಕಮಪ್ಯಕ್ಷರಂ ಯಸ್ತು ಗುರುಃ ಶಿಷ್ಯೇ ಪ್ರಬೋಧಯೇತ್ ।
ಪೃಥಿವ್ಯಾಂ ನಾಸ್ತಿ ತದ್ದ್ರವ್ಯಂ ಯದ್ದತ್ತ್ವಾಸೋ ನೃಣೀ ಭವೇತ್ ॥

ಯಾರು ಕೇವಲ ಒಂದೇ ಒಂದು ಅಕ್ಷರವನ್ನು ಕಲಿಸಿರುತ್ತಾರೋ ಅವರನ್ನು ಗುರುವೆಂದೇ ಭಾವಿಸಬೇಕು. ಈ ಭೂಮಿಯಲ್ಲಿ ವಿದ್ಯೆಯಂಥ ಸಂಪತ್ತು ಬೇರಾವುದೂ ಇಲ್ಲ. ಇಂಥ ಸಂಪತ್ತನ್ನು ಧಾರೆಯೆರೆದ ಗುರುವಿಗೆ ನಾವು ಸದಾ ಋಣಿಗಳಾಗಿರಬೇಕು. ವಿದ್ಯೆ ಎಂದರೆ ಕೇವಲ ಅಕ್ಷರಾಭ್ಯಾಸವಷ್ಟೇ ಅಲ್ಲ. ಒಳ್ಳೆಯ ಉಪದೇಶ, ಮಾತು, ಅನುಭವ, ಮಾರ್ಗದರ್ಶನಗಳು ಕೂಡ ವಿದ್ಯೆಯೇ ಆಗಿರುತ್ತದೆ".

- ಚಾಣಕ್ಯನೀತಿ

## ಪರಿವಿಡಿ


- ಸಂತರು ಹಾಗೂ ಸಾಮಾಜಿಕ ಸಮನ್ವಯ 3
- ಪ್ರಾಚೀನ ಭಾರತದಲ್ಲಿನ ಪರಿಸರ ಪ್ರಜ್ಞೆ... 5
- ಸುತ್ತೋಲೆ 6
- ಭಾರತ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಭಗತ್ ಸಿಂಗ್ ಭಯೋತ್ಪಾದಕನಾಗಲು ಸಾಧ್ಯವೇ? 6
- ಸಂಘದ ವಾರ್ತೆ 7
- ಇನ್ನಾದರೂ ಸುಳ್ಳು ಚರಿತ್ರೆಯ ಕಲಿಕೆ ನಿಲ್ಲಲಿ 8
- ರೈಲ್ವೆ ತುಣುಕು 9
- ಪದಬಂಧ 10
- ಅರುಣ್ ಶಹಾಪುರ್ ಸಾಧನೆ ಮತ್ತು ಮನವಿ 11

# ಸಂತರು ಹಾಗೂ ಸಾಮಾಜಿಕ ಸಮನ್ವಯ

■ ಶ್ರುತಿ
ಸಂಶೋಧಕರು, ಸಂಸ್ಕೃತ ವಿಶ್ವವಿದ್ಯಾನಿಲಯ


Adi Sankara    Sri Ramanuja    Sri Madhwacharya

ಭಾರತೀಯ ಸನಾತನ ಸಂಸ್ಕೃತಿಗೆ ಜ್ಞಾನನಿಧಿಗಳಾದ ವೇದಗಳೇ ಬುನಾದಿ. ವೇದಗಳಲ್ಲಿ ಅಧ್ಯಾತ್ಮದ ಕುರಿತಾಗಿ ಹೇಳಿದ ಭಾಗವನ್ನು ಉಪನಿಷತ್ತುಗಳೆಂದೂ, ಇವು ವೇದಗಳ ಸಾರರೂಪವಾಗಿರುವುದರಿಂದ ವೇದಾಂತವೆಂದೂ ಪ್ರಸಿದ್ಧವಾಗಿವೆ. ಉಪನಿಷತ್ತುಗಳು, ಸ್ಮೃತಿ ರೂಪದ ಭಗವದ್ಗೀತೆ ಹಾಗೂ ಸೂತ್ರರೂಪದ ಬ್ರಹ್ಮಸೂತ್ರಗಳು. ಇವನ್ನು ಪ್ರಸ್ಥಾನತ್ರಯ ಗ್ರಂಥಗಳು ಎನ್ನುತ್ತಾರೆ. ಬ್ರಹ್ಮಜ್ಞಾನ ಹಾಗೂ ಮೋಕ್ಷವನ್ನು ಕುರಿತಾಗಿ ಈ ಗ್ರಂಥಗಳಲ್ಲಿ ಚರ್ಚಿಸಲಾಗಿದೆ.

ಶ್ರೀ ಶಂಕರ ಭಗವತ್ಪಾದರು, ಶ್ರೀ ಮಧ್ವಾಚಾರ್ಯರು ಹಾಗೂ ಶ್ರೀ ರಾಮಾನುಜಾಚಾರ್ಯರು ಪ್ರಸ್ಥಾನ ತ್ರಯಗಳಿಗೆ ಭಾಷ್ಯವನ್ನು ಬರೆದು ಮತಾಚಾರ್ಯರೆಂದು ಪ್ರಸಿದ್ಧರಾಗಿದ್ದಾರೆ.

ಪ್ರಸ್ಥಾನ ತ್ರಯ ಗ್ರಂಥಗಳಲ್ಲಿ ಹೇಳಿದ ಜೀವ, ಬ್ರಹ್ಮ, ಜಗತ್ತು, ಅವುಗಳ ಸಂಬಂಧ ಹಾಗೂ ಮೋಕ್ಷಗಳ ಕುರಿತಾಗಿ ಭಿನ್ನವಾದ ಅಭಿಮತವನ್ನು ಆಚಾರ್ಯ ತ್ರಯರು ತಮ್ಮ ಭಾಷ್ಯಗಳಲ್ಲಿ ಉಲ್ಲೇಖಿಸಿದ್ದು ಅದ್ವೈತ, ದ್ವೈತ ಹಾಗೂ ವಿಶಿಷ್ಟಾದ್ವೈತವೆಂಬ ಸಂಪ್ರದಾಯಗಳಾಗಿ ಹೊರಹೊಮ್ಮಿವೆ. ಮೇಲ್ನೋಟಕ್ಕೆ ಮೂರು ಮತಗಳು ಕೇವಲ ಅಧ್ಯಾತ್ಮ ಸಂಬಂಧಿಯಾಗಿದ್ದು, ಅತ್ಯಂತ ಜಟಿಲವಾಗಿದ್ದು, ವಿರೋಧಗಳಿಂದ ಕೂಡಿವೆ ಎಂದು ಭಾಸವಾಗುತ್ತವೆ. ಆದರೆ ಆಚಾರ್ಯ ತ್ರಯರ ಮೂಲೋದ್ದೇಶ್ಯವೇ ವೈಯಕ್ತಿಕವಾಗಿ, ಸಾಮಾಜಿಕವಾಗಿ ಸುಖ, ಶಾಂತಿ ಹಾಗೂ ಸಮನ್ವಯವನ್ನು ಸಾಧಿಸುವುದಾಗಿದೆ. ಕೆಲವು ಅಂಶಗಳಲ್ಲಿ ಪರಸ್ಪರ ವಿಚಾರ ವಿರೋಧವಿದ್ದರೂ ಮೋಕ್ಷಸಾಧನೆಯ ವಿಚಾರದಲ್ಲಿ, ಅಂತರಂಗದ ಶುದ್ಧಿಯ ವಿಚಾರದಲ್ಲಿ ಹೀಗೆ ಹಲವು ವಿಚಾರಗಳಲ್ಲಿ ಸಹಮತವೂ ಕೂಡ ಇದೆ.

**ಶ್ರೀ ಮಧ್ವಾಚಾರ್ಯರು** (ಕ್ರಿ.ಶ 1238ರಿಂದ 1317) ದ್ವೈತದರ್ಶನದ ಪ್ರವರ್ತಕರು. ಇವರು ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿಯ ಹತ್ತಿರ ಪಾಜಕಕ್ಷೇತ್ರದಲ್ಲಿ ಹುಟ್ಟಿದರು. ಬಾಲ್ಯದಿಂದಲೇ ಇಹಲೋಕದ ವ್ಯಾಪಾರದಲ್ಲಿ ವಿರಕ್ತರಾಗಿ, ಅಧ್ಯಾತ್ಮನಿಷ್ಠರಾಗಿದ್ದರು. ಉಡುಪಿಯಲ್ಲಿ ಕೃಷ್ಣನನ್ನು ಪ್ರತಿಷ್ಠಾಪಿಸಿ, ಅನೇಕರನ್ನು ತಮ್ಮ ದರ್ಶನದಿಂದ ಅನುಯಾಯಿಗಳನ್ನಾಗಿ ಮಾಡಿಕೊಂಡಿರುತ್ತಾರೆ. ಶ್ರೀ ಮಧ್ವಾಚಾರ್ಯರು ತಮ್ಮ ಗ್ರಂಥಗಳಲ್ಲಿ ಪರಮಾತ್ಮನ ಸೃಷ್ಟಿಯು ಮಾಯಾಯುಕವಾಗಿರದೇ ಯಥಾರ್ಥವಾಗಿದೆ. ಆದ್ದರಿಂದ ಪರಮಾತ್ಮನಿಗೆ ನಿಷ್ಠರಾಗಿ ಸತ್ಕರ್ತವ್ಯಗಳನ್ನು ಮಾಡುತ್ತಾ, ಸತ್ಯ, ದಯೆ, ತ್ಯಾಗ, ಪರೋಪಕಾರ, ಅಹಿಂಸೆ, ಅದ್ರೋಹ ಮುಂತಾದ ಜಗತ್ತಿನ ಹಾಗೂ ಮಾನವತೆಯ ಧಾರಕಗಳಾದ ಗುಣಗಳನ್ನು ಬೆಳೆಸಿಕೊಳ್ಳಬೇಕು. ಹಾಗೂ ನಿಷ್ಕಾಮನೆಯಿಂದ್ ಪರಮಾತ್ಮನ ಸೇವಾದೃಷ್ಟಿಯಿಂದ ಸ್ವಕರ್ಮ ಮತ್ತು ಸಮಾಜಸೇವೆಯನ್ನು ಮಾಡಬೇಕು. ಇದರಿಂದ ಹಂತ ಹಂತವಾಗಿ ವ್ಯಕ್ತಿಯ ಅಂತರಂಗ ಶುದ್ಧಿಯಾಗುವುದಲ್ಲದೇ ಪರಮಾತ್ಮನ ದರ್ಶನಕ್ಕೆ ಇವೇ ಕಾರಣವಾಗಿವೆ ಎಂದು ಹೇಳುತ್ತಾರೆ. ಇವರ ಮತದಲ್ಲಿ ಜಗತ್ತು ಸತ್ಯವಾಗಿರುವುದರಿಂದ ಕರ್ತವ್ಯಗಳಲ್ಲಿ ವಿಮುಖರಾಗದೇ ಅವಿದ್ಯೆಯ ಭೂಮಿಕೆಯಲ್ಲಿ ತಳ್ಳದೇ ಆಚರಿಸಲೇ ಬೇಕಾದ ಆದರ್ಶದಾಯುವಾದ ಸಾಧನವಾಗಿರುವುದರಿಂದ, ಸಮಾಜಸೇವೆಯೂ ಮೋಕ್ಷಕ್ಕೆ ಸಾಧನವಾದ ಅಂಶವೇ ಆಗಿದೆ ಎಂದು ವೇದಾಂತದಲ್ಲಿಯೇ ಸಮಾಜಸೇವೆಗೆ ಇಷ್ಟೊಂದು ಮಹತ್ವವನ್ನು ನೀಡಿದ್ದಾರೆ.

**ಶ್ರೀ ರಾಮಾನುಜಾಚಾರ್ಯರು** (ಕ್ರಿ.ಶ 1017–1137) ತಮಿಳುನಾಡಿನ ಶ್ರೀ ಪೆರಂಬದೂರಿನ ಆಸೂರಿ ಕೇಶವಾಚಾರ್ಯ ಹಾಗೂ ಭೂದೇವಿಯವರ ಮಗನಾಗಿ ಜನಿಸಿದರು. ಮಾನಸ ಗುರುಗಳಾದ ಯಾಮುನಾಚಾರ್ಯರ ಕೊನೆಯ ಆಸೆಯಂತೆ ವಿಶಿಷ್ಟಾದ್ವೈತ ಮತವನ್ನು ಪುನರುತ್ಥಾಪಿಸಿದರು. ಇವರ ವಿಶೇಷತೆಯೆಂದರೆ ಇವರಿಗೆ ಜಾತಿಪದ್ಧತಿಯಲ್ಲಿ ನಂಬಿಕೆ ಇರಲಿಲ್ಲ. ಇವರ ಗುರುಗಳಾದ ಕಾಂಚೀಪೂರ್ಣರು ಹಾಗೂ ಮಹಾಪೂರ್ಣರು ಬ್ರಾಹ್ಮಣರಾಗಿರಲಿಲ್ಲ. ಅನೇಕ ಬಾರಿ ಇವರನ್ನು ಹಲವು ರೀತಿಗಳಲ್ಲಿ ರಾಮಾನುಜರು ಸತ್ಕರಿಸಿದ್ದರು. ಅಷ್ಟೇ ಅಲ್ಲ ಶ್ರೀಮಂತ, ಬಡವ ಎಂಬ ಭೇದವೂ ರಾಮಾನುಜಾಚಾರ್ಯರಲ್ಲಿ ಇರಲಿಲ್ಲ. ಮೇಲುಕೋಟೆಯಲ್ಲಿ ದೇವಾಲಯವನ್ನು ಕಟ್ಟುವಾಗಲೂ ಕೆಲಸಗಳಲ್ಲಿ ಹರಿಜನರು ನೆರವಾದರು. ಇವರನ್ನು ರಾಮಾನುಜರು ತಿರುಕುಲತ್ತಾರ್ (ಶ್ರೇಷ್ಠಕುಲದವರು) ಎಂದು ಕರೆದರು. ಒಮ್ಮೆ ಗೋಷ್ಠೀಪೂರ್ಣರೆಂಬ ಗುರುಗಳು ಅಷ್ಟಾಕ್ಷರಿ ತಿರುಮಂತ್ರವನ್ನು ಬೋಧಿಸಿದರು. ಈ ಮಂತ್ರದ ಫಲವು ಪರಮಪದವೆಂದು ತಿಳಿದು ದಿವ್ಯಜ್ಞಾನವನ್ನು ಎಲ್ಲರೂ ಪಡೆಯಬೇಕೆಂಬ ಆಶಯದಿಂದ ಊರಿನ ದೇವಸ್ಥಾನದ ಗೋಪುರವನ್ನೇರಿ ಎಲ್ಲ ಜನರಿಗೆ ಬೋಧಿಸಿದರು. ರಹಸ್ಯವಾಗಿ ಪಡೆದ ಮಂತ್ರವನ್ನು ಹೀಗೆ ಎಲ್ಲರಿಗೂ ನೀಡಿದ್ದರ ಬಗ್ಗೆ ಗುರುಗಳು ಪ್ರಶ್ನಿಸಿದಾಗ, 'ಗುರುವಿನ ಮಾತನ್ನು ಮೀರಿ ನನಗೆ ನರಕ ಪ್ರಾಪ್ತಿಯಾದರೂ ತೊಂದರೆಯಿಲ್ಲ, ಆದರೆ ಎಲ್ಲರಿಗೂ ಇದರಿಂದ ಕಲ್ಯಾಣವಾಗುವುದು ನನಗೆ ಮುಖ್ಯ'ವೆಂದರು. ಹೀಗೆ

ಪುಟ 4 ಕ್ಕೆ ➤

➢ ಪುಟ 3 ರಿಂದ..... ಸಂತರು...

ರಾಮಾನುಜಾಚಾರ್ಯರ ಸಾಮಾಜಿಕ ಪ್ರೀತಿ ಅವರ ಜೀವನದುದ್ದಕ್ಕೂ ತಿಳಿಯುತ್ತದೆ. ಅನೇಕ ದೇವಾಲಯಗಳನ್ನೂ, ಕೆರೆಗಳನ್ನೂ ಕಟ್ಟಿಸಿದ ಇವರು ಭೇದಭಾವ ರಹಿತರಾಗಿ ಎಲ್ಲರನ್ನೂ ಪ್ರೀತಿಯಿಂದ ಕಂಡರು ಹಾಗೂ ಎಲ್ಲರಿಗೂ ಇದನ್ನೇ ಬೋಧಿಸಿದರು.

**ಶ್ರೀ ಶಂಕರಾಚಾರ್ಯರು** (ಕ್ರಿ.ಶ 788–820 ) ಕೇರಳದ ಕಾಲಟಿಯಲ್ಲಿ ಆರ್ಯಾಂಬಾ ಹಾಗೂ ಶಿವಗುರು ಇವರಿಗೆ ಮಗನಾಗಿ ಜನಿಸಿದರು. ಕೇವಲ 32 ವರ್ಷಗಳ ಕಾಲ ಬದುಕಿದ್ದರೂ ಈ ಅವಧಿಯಲ್ಲಿಯೇ ಅನೇಕ ಮಹತ್ಕಾರ್ಯಗಳನ್ನು ಸಾಧಿಸಿದರು. ಅದ್ವೈತ ಸಿದ್ಧಾಂತವೇ ಎಲ್ಲವನ್ನೂ ಒಳಗೊಳ್ಳುವುದು ಎನ್ನುವುದನ್ನು ಸೂಚಿಸುತ್ತದೆ. ಎಲ್ಲವನ್ನೂ ತನ್ನಲ್ಲಿ ಕಾಣುವುದು ಹಾಗೂ ತನ್ನನ್ನು ಎಲ್ಲದರಲ್ಲಿ ಕಾಣುವ ಉದಾತ್ತ ಆತ್ಮತತ್ತ್ವವೇ ಅದ್ವೈತದ ತಿರುಳು. ಇಂತಹ ಅನುಪಮ ತತ್ತ್ವವನ್ನು ವೇದದಿಂದ ಬೆಣ್ಣೆಯಂತೆ ತೆಗೆದು ನೀಡಿದ ಆಚಾರ್ಯರೂ ನಿರುಪಮರೇ. ಜಗತ್ತು ಮಾಯೆಯಿಂದ ಆವೃತವಾಗಿದೆ. ಯಾವುದೂ ಶಾಶ್ವತವಲ್ಲವಾದ್ದರಿಂದ ಕೃತಕವಾಗಿರುವುದಕ್ಕೆ ದುಃಖಿಸಿ ಪ್ರಯೋಜನವೇನು. ಪ್ರಪಂಚದಲ್ಲಿ ನೀರಿನ ಹನಿ ಕಮಲದಲ್ಲಿ ನಿಂತಂತೆ ನಿರ್ಮಮ ಭಾವದಿಂದ ಇರಬೇಕು ಎಂಬುದನ್ನು ತಿಳಿಸುತ್ತಾರೆ. ಬೌದ್ಧರು ಆಸ್ತಿಕ ದರ್ಶನಗಳ ಅಡಿಪಾಯವನ್ನೇ ಅಲುಗಾಡಿಸಿದಾಗ ಅವರ ಸಿದ್ಧಾಂತವನ್ನು ತರ್ಕದ ಮೂಲಕ ಖಂಡಿಸಿ ಆಸ್ತಿಕ ದರ್ಶನಗಳ ಪುನರುತ್ಥಾನವನ್ನು ಮಾಡಿದರು. ಎಲ್ಲವೂ ಆತ್ಮವೇ, ಅಜ್ಞಾನದಿಂದ ಬೇರೆ ಬೇರೆಯಾಗಿ ಕಾಣುತ್ತಿದೆ. ಈ ಅಜ್ಞಾನವನ್ನು ಜ್ಞಾನದಿಂದ ನಾಶ ಮಾಡಿದರೆ ಎಲ್ಲವೂ ಮತ್ತೆ ಒಂದೇ ಆಗುತ್ತದೆ ಎಂದು ಸಾರಿದರು. ಸಂಪೂರ್ಣ ಭರತ ಖಂಡವನ್ನು ಕಾಲ್ನಡಿಗೆಯಿಂದಲೇ ಸಂಚರಿಸಿ ತಮ್ಮ ಏಕತ್ಮತಾ ಸಿದ್ಧಾಂತದಿಂದ ರಾಷ್ಟ್ರೀಯ ಭಾವೈಕ್ಯವನ್ನು ಸಾಧಿಸಿದರು.

ಆಚಾರ್ಯ ತ್ರಯರೂ ತಮ್ಮ ವಿಶಿಷ್ಟ ಜ್ಞಾನದಿಂದ ಸಮಾಜಕ್ಕೆ ಮಹಾಕೊಡುಗೆಯನ್ನು ನೀಡಿದವರೇ. ಎಲ್ಲ ಮಹಾತ್ಮರೂ ಸಮಾಜದ ಉದ್ಧಾರಕ್ಕಾಗಿಯೇ ಜನಿಸುತ್ತಾರೆ. 'ಪರಂ ಪರೋಪಕಾರಾರ್ಥಂ ಯೋ ಜೀವತಿ ಸ ಜೀವತಿ' (ಯಾರು ಬೇರೆಯವರಿಗಾಗಿ ಬದುಕುತ್ತಾನೆಯೋ ಅವನ ಬದುಕೇ ನಿಜವಾದ ಬದುಕು) ಎಂಬಂತೆ ಜೀವಿಸಿದ ಮಹನೀಯರೆಲ್ಲರ ಹಿರಿಮೆಯನ್ನು ನಮ್ಮಲ್ಲಿಯೂ ಅಳವಡಿಸಿಕೊಳ್ಳೋಣ.

ಜ್ಞಾನಯೋಗ, ಕರ್ಮಯೋಗ, ರಾಜಯೋಗ ಮತ್ತು ಭಕ್ತಿಯೋಗಗಳೆಂದು ಅಧ್ಯಾತ್ಮ ಸಾಧನೆಯ ನಾಲ್ಕು ದಾರಿಗಳೆಂದು ಹಿರಿಯರು ತೋರಿಸಿದ್ದಾರೆ. ಭಕ್ತಿಯಿಂದ ಭಗವಂತನೆಡೆಗೆ ಸಾಗಿದ ಅನೇಕ ಸಂತರು ಸಾಮಾಜಿಕವಾಗಿ ಅನೇಕ ಬದಲಾವಣೆಗಳನ್ನು ತಂದುದನ್ನು, ಸಮಾಜದ ಮೌಢ್ಯಗಳನ್ನು ತೊಡೆದು ಹಾಕಿರುವುದನ್ನು ಕಾಣಬಹುದಾಗಿದೆ.

11–12ನೆಯ ಶತಮಾನದಲ್ಲಿ ಕರ್ನಾಟಕದಲ್ಲಿ ಶರಣ ಪರಂಪರೆಯು ವಿಸ್ತಾರವಾಯಿತು. ಇದರ ಮುಖ್ಯ ಶಕ್ತಿ ಶ್ರೀ ಬಸವಣ್ಣನವರು. ಇವರ ವಚನೆಗಳು ಸಾಮಾಜಿಕ ಸಾಮರಸ್ಯವನ್ನು ಸಾರುತ್ತಾ, ಸಮಾಜದ ಮೌಢ್ಯಗಳನ್ನು ತೊಡೆದು ಹಾಕುವಲ್ಲಿ ಕ್ರಾಂತಿಕಾರಿಯಾಗಿ ಕೆಲಸ ಮಾಡಿದೆ.

ಇದೇ ರೀತಿ ಅಕ್ಕಮಹಾದೇವಿ, ಅಲ್ಲಮಪ್ರಭುಗಳು ಮುಂತಾದ ಶರಣರು ತಮ್ಮ ವಚನಗಳಿಂದ ಸಮಾಜವನ್ನು ತಿದ್ದುವ ಕಾರ್ಯ ಮಾಡಿದ್ದಾರೆ. ಕೊಂಡಗಲಿ ಕೇಶಿರಾಜ, ತೆಲುಗಿನ ಜೋಮಣ್ಣ (1120)ನವರಂತೆ ಜಾತೀಯ, ವರ್ಗೀಯ ಅಸಮಾನತೆಗಳನ್ನು ವಿರೋಧಿಸಿ, ಸಮಾನತೆಗಾಗಿ ಪ್ರೇರೇಪಿಸಿದರು.

ಜೇಡರ ದಾಸೀಮಯ್ಯ (1120) ಮಹಿಳೆಯರ ಸ್ಥಾನಮಾನಗಳಿಗಾಗಿ ಹೋರಾಡಿದರು. ಬಂಗಾಳದ ಚೈತನ್ಯರು (15ನೇ ಶ.ಮಾ) ಶಾಸ್ತ್ರಸಂಪ್ರದಾಯಯಗಳ ಗೊಡ್ಡು ಆಚರಣೆಗಳನ್ನು ಬದಿಗೊತ್ತಿ ಕೀರ್ತನ ಪಂಥವನ್ನು ಶುದ್ಧಭಕ್ತಿಪಂಥವಾಗಿ ಹುಟ್ಟುಹಾಕಿದರು. ಸಂಕೀರ್ತನೆಗಳಿಂದಲೇ ಏಕತೆಯನ್ನು ಸಾರಿದರು. ಮಹಾರಾಷ್ಟ್ರದ ಜ್ಞಾನದೇವ ಅಸ್ಸಾಮಿನ ಶಂಕರದೇವ ಮೊದಲಾದವರು ಯಜ್ಞಗಳಲ್ಲಿ ನಡೆಯುವ ಪಶುಹಿಂಸೆಯನ್ನು ವಿರೋಧಿಸಿದರು. ಪಂಜಾಬಿನ ಶ್ರೀ ಗುರು ನಾನಕರು ಹಿಂದು ಹಾಗೂ ಮುಸ್ಲಿರನ್ನು ಒಂದೇ ದೇವರ ಮಕ್ಕಳೆಂದು ಕರೆದರು. ಹಿಂದು ಮುಸ್ಲಿಂ ಸಮಾನತೆಯನ್ನು ಸಾರಿದ ಮತ್ತೋರ್ವ ಸಂತ ಕಬೀರರು.

ಜ್ಞಾನದ ಮೂಲಕ ಸಮಾಜವನ್ನು ಪ್ರೇರೇಪಿಸಿದವರು ಸಂತ ಜ್ಞಾನೇಶ್ವರರು, ಇವರ ಶಿಷ್ಯರಾದ ನಾಮದೇವ, ಸೇನ, ಗೋರ ಮುಂತಾದವರು ಭಕ್ತಿ ಮಾರ್ಗದಲ್ಲಿ ನಡೆಯುತ್ತ ಸಮಾಜಕ್ಕೆ ತಮ್ಮ ಕೊಡುಗೆಯನ್ನು ನೀಡಿದ್ದಾರೆ. ಶ್ರೀ ಅನ್ನಮಾಚಾರ್ಯರು ಸ್ವತಃ ಅಸ್ಪೃಷ್ಯರೆಂದು ನಿಂದಿತರಾಗಿದ್ದರು. ಆದರೂ ವಿಷ್ಣುವಿನ ಪರಮ ಭಕ್ತರಾಗಿ, ಭಕ್ತಿರಸದ ಕೀರ್ತನೆಗಳಿಂದ ಬ್ರಾಹ್ಮಣರಿಗೂ ಉತ್ಕೃಷ್ಟರಾದರು. ಕನಕದಾಸರೂ ಕೂಡಾ ಇದೇ ದಾರಿಯಲ್ಲಿ ನಡೆದವರು. ಭಕ್ತಿಪಂಥವು ಸಮಾಜದಲ್ಲಿ ಸಮಾನ ಸ್ಥಾನಮಾನ ಕಲ್ಪಿಸಿದೆ. ಅಕ್ಕ ಮಹಾದೇವಿ, ಸಂತ ಜ್ಞಾನದೇವರ ತಂಗಿ ಮುಕ್ತಾಬಾಯಿ, ಜನಾಬಾಯಿ, ಶ್ರೀಕೃಷ್ಣ ಭಕ್ತೆ ಮೀರಾಬಾಯಿ ಇತರರನ್ನು ಸ್ಮರಿಸಬಹುದು.

ಹೀಗೆ ಭಕ್ತಿಪಂಥದಿಂದ ಸಮಾಜವನ್ನು ತಿದ್ದಿ ತೀಡಿದ ಮಹನೀಯರನ್ನು ಸಂತಶ್ರೇಷ್ಠರನ್ನು ಇಂದು ಸಹಬಾಳ್ವೆ ನಡೆಸಲು ಕಾರಣರಾದವನ್ನು ಸ್ಮರಿಸಬಹುದಾಗಿದೆ.

ಆಚಾರ್ಯ ಶಂಕರಭಗವತ್ಪಾದರ ಜನ್ಮದಿನ ವೈಶಾಖ ಶುಕ್ಲ ಪಂಚಮಿಯು ಈ ಬಾರಿ 11.05.2016 ಹಾಗೂ ಆಚಾರ್ಯ ರಾಮಾನುಜರ ಜನ್ಮದಿನ ವೈಶಾಖ ಶುಕ್ಲ ಚತುರ್ಥೀ ಈ ಬಾರಿ 10.05.2016ರಂದು ಬಂದಿದೆ. ಶ್ರೀ ಬಸವಣ್ಣನವರ ಜನ್ಮದಿನವು ವೈಶಾಖ ಶುದ್ಧ ತೃತೀಯಾ ಆಗಿದೆ. ಈ ಸಂದರ್ಭದಲ್ಲಿ ಅವರ ಸಾಮಾಜಿಕ ಕೊಡುಗೆಯನ್ನು ಸ್ಮರಿಸಿದ ಲೇಖನವಾಗಿದೆ.

●

# ಪ್ರಾಚೀನ ಭಾರತದಲ್ಲಿನ ಪರಿಸರ ಪ್ರಜ್ಞೆ..



**ಪರಿಸರ ರಕ್ಷಣೆ**
**ನಮ್ಮೆಲ್ಲರ ಹೊಣೆ..**
**ಕಾಡು ಬೆಳೆಸಿ**
**ನಾಡು ಉಳಿಸಿ..**



**ಭೀಮಸೇನ್ ಪುರೋಹಿತ್**
**ಬಿ.ಇ.,ಎಂ.ಟೆಕ್.,**

ಇಂತಹ ಹತ್ತಾರು ಘೋಷಣೆಗಳು ಇಂದು ಮಾರ್ದನಿಸುತ್ತಿರುವುದನ್ನು ನಾವು ಕೇಳಿದ್ದೇವೆ. ಪರಿಸರದ ಮೇಲೆ ಯಥೇಚ್ಛವಾಗಿ ಶೋಷಣೆ ನಡೆಸಿ, ಯಾವಾಗ ಅದರ ಪ್ರತಿಕೂಲ ಪರಿಣಾಮಗಳು ನಮ್ಮನ್ನು ಬಾಧಿಸಲು ಪ್ರಾರಂಭಿಸಿದವೋ, ಆಗ ಎಚ್ಚೆತ್ತ ಜನರ ಕಾಳಜಿಯ ಕರೆಗಳಿವು...

ಸಸ್ಯಶ್ಯಾಮಲೆಯಾದ, ಸುಜಲೆಯಾದ, ಸುಫಲೆಯಾದ ಪ್ರಕೃತಿ, ಹೀಗೆ ವಿರುದ್ಧವಾಗಿ ಬದಲಾವಣೆಯಾಗಲು, ನಾವು ಎಡವಿದ್ದೆಲ್ಲಿ ?, ನಮ್ಮ ಹಿರಿಯರಿಗೆ ಪರಿಸರದ ಜ್ಞಾನ ಇರಲಿಲ್ಲವೇ ? – ಮುಂತಾದ ಪ್ರಶ್ನೆಗಳು ಎದ್ದಾಗ ಸಿಗುವ ಉತ್ತರ ನಮ್ಮ ನಿರ್ಲಕ್ಷ್ಯವೇ..

ಪ್ರಾಚೀನ ಭಾರತದ ಇತಿಹಾಸವನ್ನು ಅವಲೋಕಿಸಿದಲ್ಲಿ, ಸಾಹಿತ್ಯಗಳ ಅಧ್ಯಯನ ನಡೆಸಿದರೆ, ಪ್ರಕೃತಿಯ ಅಭಿವೃದ್ಧಿಗೆ, ಅದರ ರಕ್ಷಣೆಗೆ ಹೆಚ್ಚಿನ ಪ್ರಾಶಸ್ತ್ಯವನ್ನು ನೀಡಿದ್ದು ತಿಳಿಯುತ್ತದೆ.. ಮೂಲವಾಗಿ ಪ್ರಕೃತಿಯನ್ನೇ ದೇವರ ರೂಪವಾಗಿ ಕಾಣುವ ಸಂಸ್ಕಾರ ಭಾರತೀಯರಲ್ಲಿದೆ. 'ನಿರೀಶ್ವರ ಸಾಂಖ್ಯ' ಎಂಬ ಮತದವರು ಈ ಪ್ರಕೃತಿಯೊಂದೆ ಸರ್ವಶಕ್ತವಾದದ್ದು ಎನ್ನುತ್ತಾರೆ. ವೈದಿಕ ಮತದವರು ಮಾಡುವ ಅಗ್ನಿಹೋತ್ರ, ಹೋಮ, ಯಜ್ಞ–ಯಾಗಾದಿಗಳಿಂದ ವಾತಾವರಣದ ಕಲುಷತೆ ಕ್ಷೀಣಿಸುತ್ತದೆ ಎಂಬ ಅಭಿಪ್ರಾಯವನ್ನು ಈಗೀಗ ಅನ್ಯ ವಿದ್ವಾಂಸರೂ ಒಪ್ಪುತ್ತಿದ್ದಾರೆ. ಜೈನ–ಬೌದ್ಧ ಧರ್ಮಗಳಂತೂ, ಅಹಿಂಸೆಯನ್ನೇ ಧರ್ಮವಾಗಿಸಿಕೊಂಡು ಸಸ್ಯ–ಪಶು–ಪಕ್ಷಿಗಳ ರಕ್ಷಣೆಗೆ ಸಾಕಷ್ಟು ಮಹತ್ವವನ್ನು ನೀಡಿದ್ದಾರೆ.

ಇನ್ನು ಭಾರತೀಯ ಸಾಹಿತ್ಯಕ್ಕೆ ಬಂದರೆ, ಅಲ್ಲಿಯೂ ಅನೇಕ ಗಹನ ವಿಚಾರಗಳು ದೊರೆಯುತ್ತವೆ. ಮನುಸ್ಮೃತಿಯಲ್ಲಿ ಇಡೀ ನಗರ, ಅದರ ಸುತ್ತಲಿನ ಪರಿಸರ ಎಲ್ಲದರ ಬಗ್ಗೆ ವಿಚಾರಗಳನ್ನು ಹೇಳಲಾಗಿದೆ. ನದಿಪಾತ್ರದ ಸುಮಾರು ಒಂದು ಯೋಜನ ದೂರ ಪರ್ಯಂತ ಮಲ–ಮೂತ್ರ ವಿಸರ್ಜನೆಯಂತಹ ಯಾವ ತ್ಯಾಜ್ಯ ಪದಾರ್ಥಗಳೂ ಇರದಂತೆ ನೋಡಿಕೊಳ್ಳಬೇಕೆಂಬ ಮಾತುಗಳಿವೆ. ಯಾಜ್ಞವಲ್ಕ್ಯ ಸ್ಮೃತಿಯಲ್ಲಿ ಗಿಡ–ಮರಗಳನ್ನು ಅನಾವಶ್ಯಕವಾಗಿ ಹಾಳು ಮಾಡುವವರ ಮೇಲೆ ತೆಗೆದುಕೊಳ್ಳಬೇಕಾದ ಕಠಿಣ ಕ್ರಮಗಳ ಉಲ್ಲೇಖಗಳಿವೆ. ಮತ್ಸ್ಯಪುರಾಣದ ಈ ವಾಕ್ಯ ವೃಕ್ಷದ ಮಹತ್ವವನ್ನೇ ಹೇಳುತ್ತದೆ.

**'ದಶಕೂಪಸಮಾ ವಾಪೀ ದಶವಾಪೀಸಮೋ ಹ್ರದಃ ।**
**ದಶಹ್ರದಸಮಃ ಪುತ್ರೋ ದಶಪುತ್ರಸಮೋ ದ್ರುಮಃ ॥"**

– ಒಂದು ಸರೋವರ ಹತ್ತು ಬಾವಿಗಳಿಗೆ ಸಮ, ಒಂದು ದೊಡ್ಡ ಕೆರೆ ಹತ್ತು ಸರೋವರಗಳಿಗೆ ಸಮ, ಒಬ್ಬ ಮಗ ಹತ್ತು ಸರೋವರಗಳಿಗೆ ಸಮ, ಮತ್ತು ಒಂದು ಮರ ಹತ್ತು ಪುತ್ರರಿಗೆ ಸಮ.

ಶ್ಲೋಕದ ಒಟ್ಟು ತಾತ್ಪರ್ಯದಲ್ಲಿ, ಒಂದು ಮರಕ್ಕೆ ಎಷ್ಟು ಮಹತ್ವ ಕೊಡಬೇಕೆಂಬುದು ಸ್ಪಷ್ಟವಾಗಿದೆ. ಮನೆಯ ಮಕ್ಕಳಂತೆ ಗಿಡ–ಮರಗಳನ್ನು ಬೆಳೆಸಿ ನೋಡಿಕೊಳ್ಳಬೇಕೆಂಬ ಮಮತೆಯ ಚಿತ್ರಣವೂ ಇಲ್ಲಿ ಅಡಕವಾಗಿದೆ. ಹೀಗಾಗಿಯೇ, ಇಂದು ಭಾರತೀಯ ಸಂಪ್ರದಾಯದಲ್ಲಿ ಒಂದೊಂದು ಉತ್ಸವಕ್ಕೂ ಒಂದರಂತೆ, ವೃಕ್ಷಗಳಿಗೆ ಪೂಜನೀಯ ಸ್ಥಾನ ನೀಡಲಾಗಿದೆ. ಅರಳಿ, ಆಲ, ಮಾವು, ಬೇವು, ತುಳಸಿ. ಬಿಲ್ವ, ಬನ್ನಿ ಹೀಗೆ ಹತ್ತು ಹಲವಾರು ಮರಗಿಡಗಳನ್ನು ದೇವತಾ ಪ್ರತೀಕಗಳಂತೆ ಪೂಜೆ ಮಾಡುವ ಪದ್ಧತಿ ನಮ್ಮಲ್ಲಿದೆ. ಧಾರ್ಮಿಕ ಅಂಶಗಳೇನಿದ್ದರೂ, ತನ್ಮೂಲಕ ವೃಕ್ಷ ಸಂತತಿಯ ರಕ್ಷಣೆ ಆಗುತ್ತಿತ್ತು ಎಂಬುದಂತೂ ಸತ್ಯ..

ಕಾಲದ ಪ್ರಭಾವದಿಂದ, ನಮ್ಮದೇ ಋಷಿ–ಮುನಿಗಳ ಹಿತವಚನಗಳನ್ನು ಕಡೆಗಾಣಿಸಿ, ಅದರ ಫಲವನ್ನು ಕಷ್ಟದಿಂದ ಅನುಭವಿಸುವ ಹಂತಕ್ಕೆ ತಲುಪಿದ್ದೇವೆ. ಇಂದು "ಪರಿಸರ ವಿಜ್ಞಾನ ಮತ್ತು ರಕ್ಷಣೆ" ಎಂಬ ಅಧ್ಯಯನದ ಶಾಖೆಯೇ ತೆರೆದುಕೊಂಡಿದೆ. ಜನ ಹಣ ನೀಡಿ ಅವನ್ನು ಆಯ್ಕೆ ಮಾಡಿಕೊಳ್ಳುತ್ತಲೂ ಇದ್ದಾರೆ. ನಮ್ಮ ಸ್ಮೃತಿ–ಪುರಾಣಗಳನ್ನೇ ಆಸ್ಥೆಯಿಂದ ಅಭ್ಯಾಸ ಮಾಡಿ, ಉತ್ತಮ ಅಂಶಗಳನ್ನು ಪಾಲಿಸಿದಿದ್ದರೆ, ಪರಿಸರ ರಕ್ಷಣೆಯಂತಹ ದಿನನಿತ್ಯದ ಕರ್ತವ್ಯವನ್ನೂ ದುಡ್ಡು ಕೊಟ್ಟು ಓದುವ ಸಂದರ್ಭ ಬರುತ್ತಿರಲಿಲ್ಲವೇನೋ..

ಆದದ್ದಾಯಿತು. ಇನ್ನಾದರೂ ಏಳೋಣ. ಜೂನ್ 5 ಪರಿಸರ ದಿನಾಚರಣೆ. "ಹೊಸ ಚಿಗುರು–ಹಳೆ ಬೇರು ಕೂಡಿರಲು ಮರ ಸೊಬಗು" ಎಂಬ ಕವಿವಾಣಿಯಂತೆ, ಆಧುನಿಕರ ಚಿಂತನೆ, ಪ್ರಾಚೀನರ ದೂರದೃಷ್ಟಿಗಳನ್ನು ಮೇಳೈಸಿ, ಪ್ರಕೃತಿಮಾತೆಯ ರಕ್ಷಣೆಗೆ ತನ್ಮೂಲಕ ಇಡೀ ಮನುಕುಲದ ಸೇವೆಗೆ ಕಂಕಣಬದ್ಧರಾಗೋಣ..

**ವಂದೇ ಮಾತರಂ..**

**ಎಲ್ಲದರಲ್ಲಿಯೂ ಪ್ರೇಮವಿರುವುದೇ ಬ್ರಹ್ಮವಿಹಾರ – ಕವೀಂದ್ರ ರವೀಂದ್ರರು.**

## ಸುತ್ತೋಲೆ

## ವಿಷಯ: ಕರ್ನಾಟಕ ರಾಜ್ಯ ಸರ್ಕಾರಿ/ ಅನುದಾನಿತ ಪ್ರೌಢಶಾಲಾ ಶಿಕ್ಷಕರುಗಳಿಗೆ ಒಂದು ಹೆಚ್ಚುವರಿ ವೇತನ ಬಡ್ತಿಯನ್ನು ನೀಡುವ ಬಗ್ಗೆ.

**ಉಲ್ಲೇಖ: 1. ಶ್ರೀ ಕುಮಾರ್ ನಾಯಕ್ ಅಂದಿನ ಸರ್ಕಾರದ ಕಾರ್ಯದರ್ಶಿ. ಶಿಕ್ಷಣ ಇಲಾಖೆ ಇವರ ನೇತೃತ್ವದ ಸಮಿತಿಯ ವರದಿ.**

**2.ಸರ್ಕಾರದ ಆದೇಶ ಸಂಖ್ಯೆ:ಇಡಿ 264 ಎಸ್ ಎಸ್ಎಲ್‌ಬಿ 2012 ದಿನಾಂಕ: 09.05.2012.**

ಸರ್ಕಾರದ ಆದೇಶ ಸಂಖ್ಯೆ: ಇಡಿ 78 ಎಸ್ಎಲ್‌ಬಿ 2016, ಬೆಂಗಳೂರು, ದಿನಾಂಕ: 15.04.2016

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರಿ/ ಅನುದಾನಿತ ಪ್ರೌಢಶಾಲಾ ಶಿಕ್ಷಕರುಗಳಿಗೆ ಮತ್ತು ಮುಖ್ಯ ಶಿಕ್ಷಕರುಗಳಿಗೆ ಈ ಕೆಳಕಂಡ ಸೌಲಭ್ಯಗಳನ್ನು ವಿಸ್ತರಿಸಲು ಸರ್ಕಾರವು ಹರ್ಷಿಸುತ್ತದೆ.


1. ಜೂನ್ 2016 ರಂದು ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ/ ಅನುದಾನಿತ ಪ್ರೌಢಶಾಲಾ ಶಿಕ್ಷಕರು ಮತ್ತು ಮುಖ್ಯ ಶಿಕ್ಷಕರುಗಳಿಗೆ ಒಂದು ಹೆಚ್ಚುವರಿ ವೇತನ ಬಡ್ತಿಯನ್ನು ಮಂಜೂರು ಮಾಡಲಾಗಿದೆ.
2. ದಿನಾಂಕ: 01.08.2008 ರ ಪೂರ್ವದಲ್ಲಿ ಸರ್ಕಾರಿ/ ಅನುದಾನಿತ ಪ್ರೌಢಶಾಲೆಯಲ್ಲಿ ನೇಮಕಾತಿಗೊಂಡು ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರುಗಳಿಗೆ ನೀಡಲಾಗುತ್ತಿರುವ ರೂ 400/– ಗಳ ವಿಶೇಷ ಭತ್ಯೆಯನ್ನು ಮುಂದುವರೆಸಲಾಗಿದೆ.
3. ತಮ್ಮ ವೇತನ ಶ್ರೇಣಿ ಅಂತಿಮ ಹಂತವನ್ನು ತಲುಪಿರುವ ಮುಖ್ಯ ಶಿಕ್ಷಕರು ಹಾಗೂ ಪ್ರೌಢಶಾಲಾ ಶಿಕ್ಷಕರುಗಳು ಮೇಲಿನಂತೆ ಮಂಜೂರು ಮಾಡಿರುವ ಒಂದು ಹೆಚ್ಚುವರಿ ವೇತನ ಬಡ್ತಿಯನ್ನು ಪಡೆಯಲು ಅರ್ಹರಾಗಿರುತ್ತಾರೆ.
4. ಮೇಲಿನ ಸೌಲಭ್ಯಗಳು ದಿನಾಂಕ: 01.06.2016 ರಿಂದ ಅಂದರೆ, 2016 ಜೂನ್ ತಿಂಗಳ ವೇತನದಿಂದ ಜಾರಿಗೆ ಬರುತ್ತದೆ.
5. ಆರ್ಥಿಕ ಹೊರೆಯನ್ನು ಒಳಗೊಂಡಿರದ ಸಂಘದ ಇತರ ಬೇಡಿಕೆಗಳನ್ನು ಶಿಕ್ಷಣ ಇಲಾಖೆಯು ಪರಿಶೀಲಿಸಲಿದೆ.
6. ಆರ್ಥಿಕ ಹೊರೆಯನ್ನು ಒಳಗೊಂಡಿರುವ ಸಂಘದ ಬೇಡಿಕೆಗಳನ್ನು ಮುಂದಿನ ವೇತನ ಸಮಿತಿ/ವೇತನ ಆಯೋಗದ ಮುಂದೆ ಮಂಡಿಸಲಾಗುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯು ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

**ಸಹಿ/ ಹೆಚ್.ಎಸ್. ಹೊನ್ನೇಗೌಡ,** ಸರ್ಕಾರದ ಅಧೀನ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಪ್ರೌಢಶಾಲೆ)

---



## ಭಾರತ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಭಗತ್ ಸಿಂಗ್ ಭಯೋತ್ಪಾದಕನಾಗಲು ಸಾಧ್ಯವೇ?

ಸ್ವಾತಂತ್ರ್ಯ ಹೋರಾಟಗಾರ ಭಗತ್ ಸಿಂಗ್ ಅವರನ್ನು ದೆಹಲಿ ವಿಶ್ವವಿದ್ಯಾಲಯದ ಪಠ್ಯಪುಸ್ತಕದಲ್ಲಿ ಕ್ರಾಂತಿಕಾರಿ ಭಯೋತ್ಪಾದಕ' ಎಂದು ಕರೆದಿರುವುದು ಹೊಸ ವಿವಾದಕ್ಕೆ ಕಾರಣವಾಗಿದೆ. ಈ ತಪ್ಪನ್ನು ಸರಿಪಡಿಸುವಂತೆ ಕೋರಿ ಭಗತ್ ಸಿಂಗ್ ಕುಟುಂಬದ ಸದಸ್ಯರು ದೆಹಲಿ ವಿ.ವಿ ಅಧಿಕಾರಿಗಳು ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯವನ್ನು ಆಗ್ರಹಿಸಿದ್ದಾರೆ. ಪ್ರಮುಖ ಇತಿಹಾಸಕಾರರಾದ ಬಿಪಿನ್ ಚಂದ್ರ ಮತ್ತು ಮೃದುಲಾ ಮುಖರ್ಜಿ ಅವರು ಬರೆದಿರುವ 'ಭಾರತದ ಸ್ವಾತಂತ್ರ್ಯ ಹೋರಾಟ' ಎಂಬ ಪುಸ್ತಕದ 20ನೇ ಅಧ್ಯಾಯದಲ್ಲಿ ಭಗತ್ ಸಿಂಗ್ ಅಲ್ಲದೆ, ಚಂದ್ರಶೇಖರ್ ಆಜಾದ್, ಸೂರ್ಯಸೇನ್ ಮತ್ತು ಇತರರನ್ನು ಕ್ರಾಂತಿಕಾರಿ ಭಯೋತ್ಪಾದಕರು' ಎಂದು ಬಣ್ಣಿಸಲಾಗಿದೆ. 'ಚಿತ್ತಗಾಂಗ್ ಚಳವಳಿ' ಮತ್ತು ಸ್ಯಾಂಡರ್ಸ್ ಹತ್ಯೆಯನ್ನು ಈ ಪಠ್ಯಪುಸ್ತಕದಲ್ಲಿ 'ಭಯೋತ್ಪಾದಕ ಕೃತ್ಯ' ಎಂದು ಹೇಳಲಾಗಿದೆ. ಭಗತ್‌ಸಿಂಗ್ ಕುಟುಂಬದ ಸದಸ್ಯರು ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವೆ ಸ್ಮೃತಿ ಇರಾನಿ ಅವರಿಗೆ ಪತ್ರ ಬರೆದಿದ್ದು, ಈ ವಿಷಯದಲ್ಲಿ ಮಧ್ಯ ಪ್ರವೇಶಿಸಿ, ಪಠ್ಯ ಪುಸ್ತಕದಲ್ಲಿ ತಿದ್ದುಪಡಿ ತರಬೇಕು ಎಂದು ಒತ್ತಾಯಿಸಿದ್ದಾರೆ. ಭಗತ್ ಅವರನ್ನು ಗಲ್ಲಿಗೇರಿಸಿದ್ದ ಬ್ರಿಟಿಷರು ಕೂಡಾ ತಮ್ಮ ತೀರ್ಪಿನಲ್ಲಿ ಅವರಿಗೆ ನೈಜ ಕ್ರಾಂತಿಕಾರಿ ಎಂಬ ಪದ ಬಳಸಿದ್ದರು. ಆದರೆ ಈ ಪಠ್ಯಪುಸ್ತಕದಲ್ಲಿ ಕ್ರಾಂತಿಕಾರಿಗಳಿಗೆ ಭಯೋತ್ಪಾದಕರು ಎಂಬ ಪದ ಬಳಸಿ ವಿವಾದ ಹುಟ್ಟುಹಾಕಿರುವುದು ದುರದೃಷ್ಟ ಎಂದು ಭಗತ್ ಅವರ ಸೋದರಳಿಯ ಅಭಯ್ ಸಿಂಗ್ ಸಂಧು ಹೇಳಿದ್ದಾರೆ.

# ಸಂಘದ ವಾರ್ತೆ

## ಕಪ್ಪು ಪಟ್ಟಿ ಧರಿಸಿ ಶಿಕ್ಷಕರ ಪ್ರತಿಭಟನೆ



**ಜೇವರ್ಗಿ :** ತಮ್ಮ ವಿವಿಧ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಜೇವರ್ಗಿ ತಾಲ್ಲೂಕು ಘಟಕದ ನೇತೃತ್ವದಲ್ಲಿ ಶಿಕ್ಷಕರು ಗುರುವಾರ ತಾಲ್ಲೂಕಿನ ಎಸ್.ಎಸ್.ಎಲ್.ಸಿ ಪರೀಕ್ಷಾ ಕೇಂದ್ರಗಳಲ್ಲಿ ಕಪ್ಪು ಪಟ್ಟಿ ಧರಿಸಿ ಸಾಂಕೇತಿಕವಾಗಿ ಪ್ರತಿಭಟನೆ ನಡೆಸಿ, ನಂತರ ಕರ್ತವ್ಯ ನಿರ್ವಹಿಸಿದರು.

ಶಿಕ್ಷಕರ ವೇತನ ತಾರತಮ್ಯ ಸರಿಪಡಿಸಬೇಕು. ಕಾಲ್ಪನಿಕ ವೇತನ ಬಡ್ತಿ ನೀಡಬೇಕು ಶಾಲಾ, ಕಾಲೇಜುಗಳಿಗೆ ಅನುದಾನ ನೀಡಬೇಕು, ಅತಿಥಿ ಉಪನ್ಯಾಸಕರ ಸೇವೆ ಕಾಯಂಗೊಳಿಸಬೇಕು.

7ನೇ ವೇತನ ಆಯೋಗದ ಶಿಫಾರಸುಗಳನ್ನು ಯಥಾವತ್ತಾಗಿ ಜಾರಿಗೊಳಿಸಬೇಕು. ವರ್ಗಾವಣೆ ನೀತಿಯಲ್ಲಿ ಬದಲಾವಣೆ ತರಬೇಕು ಎಂದು ರಾಜ್ಯ ಸರ್ಕಾರವನ್ನು ಆಗ್ರಹಿಸಿದರು.

ತಾಲ್ಲೂಕಿನ 12 ಎಸ್.ಎಸ್.ಎಲ್.ಸಿ ಪರೀಕ್ಷಾ ಕೇಂದ್ರಗಳಲ್ಲಿ ಕಪ್ಪು ಪಟ್ಟಿ ಧರಿಸಿ ಪರೀಕ್ಷೆ ಕರ್ತವ್ಯ ನಿರ್ವಹಿಸಿದರು.

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕರ ಸಂಘದ ವಿಭಾಗ ಪ್ರಮುಖ ಮಹೇಶ್ ಬಸರಕೋಡ, ತಾಲ್ಲೂಕು ಘಟಕದ ಅಧ್ಯಕ್ಷ ಅಶೋಕ ಜೋಶಿ, ರವಿ ಜಾದವ, ಸಿದ್ದು ಕಕ್ಕಳಮೇಲಿ, ಅಬ್ದುಲ್ ಕರೀಮಸಾಬ್, ಶಾಂತಪ್ಪ, ಬಿರಾದಾರ, ಎಸ್.ಬಸಣ್ಣ, ಬಲವಂತರಾಯ, ಧನಸಿಂಗ್ ರಾಠೋಡ, ಬಸವರಾಜ ಕುಂಬಾರ, ಮಾಧ್ಯಮಿಕ ಶಾಲಾ ಶಿಕ್ಷಕರ ಸಂಘದ ಪದಾಧಿಕಾರಿಗಳು, ಶಿಕ್ಷಕರು ಸಾಂಕೇತಿಕ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.













## ಮೌಲ್ಯಮಾಪನ ಬಹಿಷ್ಕಾರ

**ರಾಮನಗರ :** ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಕರೆಗೆ ಓಗೊಟ್ಟು ರಾಮನಗರ ಜಿಲ್ಲಾ ಶಿಕ್ಷಕರು 18.4.16 ರಂದು ಎಸ್.ಎಸ್.ಎಲ್.ಸಿ. ಪರೀಕ್ಷೆಯ ಉತ್ತರ ಪತ್ರಿಕೆಗಳ ಮೌಲ್ಯಮಾಪನವನ್ನು ಬಹಿಷ್ಕರಿಸಿದರು.

ಶಿಕ್ಷಕರು, ಸಹಶಿಕ್ಷಕ ಸಂಘದ ಅಧ್ಯಕ್ಷರ ಏಕಪಕ್ಷೀಯ ನಿರ್ಧಾರವನ್ನು ಖಂಡಿಸಿದರು.

ಈ ಮುಷ್ಕರದಲ್ಲಿ ಜಿಲ್ಲಾ ಘಟಕದ ಅಧ್ಯಕ್ಷರಾದ ಸಿ.ವಿ ಜಯಣ್ಣ, ಜಿಲ್ಲಾ ಪದಾಧಿಕಾರಿಗಳಾದ ಚನ್ನೇಗೌಡ, ವರದರಾಜು, ಹೆಚ್.ವಿ ಮಹಾಲಿಂಗಯ್ಯ, ಸಿದ್ಧಲಿಂಗಯ್ಯ, ಅಮಾಕಪ್ಪ, ಅಪ್ಪಾಜಿ ಮುಂತಾದವರು ಭಾಗವಹಿಸಿದ್ದರು.

ರಾಮನಗರದ ಡಿ ಡಿ ಪಿ ಐ ಮತ್ತು ಜಿಲ್ಲಾಧಿಕಾರಿಗಳ ಮನವಿಯನ್ನು ತಿರಸ್ಕರಿಸಿ ಮುಷ್ಕರ ಮುಂದುವರಿಸಿದರು. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ 19-4-16ರಿಂದ ಮುಷ್ಕರವನ್ನು ಹಿಂತೆಗೆಯಲಾಯಿತು.

# ಇನ್ನಾದರೂ ಸುಳ್ಳು ಚರಿತ್ರೆಯ ಕಲಿಕೆ ನಿಲ್ಲಲಿ

■ ಹೆಚ್. ನಾಗಭೂಷಣ್ ರಾವ್

**ಧರ್ಮಾರ್ಥ ಕಾಮ ಮೋಕ್ಷಾಣಾಂ ಉಪದೇಶಸಮನ್ವಿತಂ ।**
**ಪುರಾವೃತ್ತಂ ಕಥಾರೂಪಂ ಇತಿಹಾಸಃ ಪ್ರಚಕ್ಷತೇ ॥**

ಕಾಶ್ಮೀರದ ಖ್ಯಾತ ಇತಿಹಾಸಕಾರನಾದ ಕಲ್ಹಣನ ರಾಜತರಂಗಿಣಿಯಲ್ಲಿ ಇತಿಹಾಸವೆಂದರೇನೆಂದು ತಿಳಿಹೇಳುವ ಮೇಲಿನ ಶ್ಲೋಕದ ಅರ್ಥ "ಧರ್ಮ ಅರ್ಥ ಕಾಮ ಮತ್ತು ಮೋಕ್ಷಗಳೆಂಬ ಪುರುಷಾರ್ಥಗಳ ಉಪದೇಶದಿಂದೊಡಗೂಡಿದ, ಹಿಂದೆ ನಡೆದ ವೃತ್ತಗಳನ್ನು (ಸನ್ನಿವೇಶಗಳನ್ನು) ಕಥೆಯ ರೂಪದಲ್ಲಿ ಹೇಳುವುದನ್ನೇ ಇತಿಹಾಸವೆಂದು ಕರೆಯುತ್ತಾರೆ."

ಇದರಂತೆ ಇತಿಹಾಸ ಆಯಾ ಸಮಾಜಕ್ಕೆ ಮುನ್ನಡೆಯುವ ಗುರಿ ಮತ್ತು ದಾರಿಯನ್ನು ತೋರಬೇಕು. ಸ್ವಸಾಮರ್ಥ್ಯ, ಶಕ್ತಿ ಮತ್ತು ಆತ್ಮ ವಿಶ್ವಾಸವನ್ನು ತುಂಬಬೇಕು. ಅಲ್ಲಿನ ಭವಿಷ್ಯದ ಪೀಳಿಗೆಗೆ ಧೈರ್ಯ, ಸಾಹಸ ಮತ್ತು ವಿಜಯದ ಕನಸನ್ನು ಮೂಡಿಸಬೇಕು. ಇತಿಹಾಸವೇ ದೇಶದ ಪ್ರಾಣ. ಹಾಗಾಗಿ ಯಾವ ದೇಶ ತನ್ನ ನೈಜ ಇತಿಹಾಸವನ್ನು ಮರೆಯುತ್ತದೋ ಆ ದೇಶ ತನ್ನ ಅಸ್ಥಿತೆ ಹಾಗೂ ಅಸಿತ್ವವನ್ನೇ ಕಳೆದುಕೊಳ್ಳುತ್ತದೆ ಈ ಮಾತಿಗೆ ರೋಂ, ಈಜಿಪ್ಟ್, ಇರಾನ್ ದೇಶಗಳ ಪಳೆಯುಳಿಕೆಯೇ ಸಾಕ್ಷಿ. ಆದ್ದರಿಂದಲೇ ನಮ್ಮ ಮಕ್ಕಳಿಗೆ ನಾವು ನೈಜ ಇತಿಹಾಸ ಕಲಿಸಬೇಕು.

ಆದರೆ ಸ್ವಾತಂತ್ರ್ಯ ಬಂದು 68 ವರ್ಷ ಕಳೆದರೂ, ನಮ್ಮಲ್ಲಿ ಆತ್ಮವಿಸ್ಮೃತಿ ಉಂಟುಮಾಡಿ, ಕೀಳರಿಮೆ ನಿರ್ಮಾಣವಾಗಲೆಂಬ ಉದ್ದೇಶದಿಂದ ಮೆಕಾಲೆ ಹಾಗೂ ಮಾರ್ಕ್ಸ್‌ನ ಮಾನಸಪುತ್ರರಿಂದ ರಚಿತವಾದ ವಿಕೃತ ಇತಿಹಾಸವನ್ನು ಇಂದಿಗೂ ಕಲಿಸುತ್ತಿದ್ದೇವೆ. ಇದಕ್ಕೆ ಒಂದೆರಡು ಉದಾಹರಣೆಗಳು ಸಾಕು.

ಅರ್ಜುನದೇವ್ ಮತ್ತು ಇಂದಿರಾದೇವ್‌ರವರು ಜತೆಯಾಗಿ ರಚಿಸಿದ NCERT ಯ 8ನೇ ತರಗತಿ ಸಮಾಜವಿಜ್ಞಾನ 'ಆಧುನಿಕ ಭಾರತ' ದಲ್ಲಿ ಉದುರಿಸಿದ ಮುತ್ತಿನ ನುಡಿ "ಭಗತ್‌ಸಿಂಗ್, ಚಂದ್ರ ಶೇಖರ ಆಜಾದ್, ಸುಖದೇವ್, ರಾಜಗುರು, ಸಾವರ್‌ಕರ್, ಲಾಲಾಲಜಪತ್ ರಾಯ್, ಲೋಕಮಾನ್ಯ ತಿಲಕ್, ಬಿಪಿನ್ ಚಂದ್ರಪಾಲ್, ಯೋಗಿ ಅರವಿಂದ ಮುಂತಾದವರು ಆತಂಕವಾದಿಗಳಾಗಿದ್ದರು".

ಇದೇ ದಂಪತಿಗಳು ಅದೇ ಪುಸ್ತಕದ 166 ಪುಟದಲ್ಲಿ ಬರೆದದ್ದು **"1857 ರ ಹೋರಾಟ ಒಂದು ವಿದ್ರೋಹವಾಗಿತ್ತು"**.

ಇನ್ನೋರ್ವ ಕಾಂಗ್ರೆಸ್ ಸರ್ಕಾರೀ ಕೃಪಾಪೋಷಿತ ಚರಿತ್ರಕಾರಿಣಿ ರೋಮೀಲಾ ಥಾಪರ್, ಮಧ್ಯ ಕಾಲೀನ ಭಾರತ ಎಂಬ ಪುಸ್ತಕದ 107ನೇ ಪುಟದಲ್ಲಿ ಉದುರಿಸಿದ ಮುತ್ತು **"ಸಿಖ್ಖರ 8ನೇ ಗುರು ತೇಜ್‌ಬಹದ್ದೂರ್ ಓರ್ವ ಲೂಟಿಕೋರ"** ಈ ರೀತಿಯ ಅಪ್ಪಟ ಸುಳ್ಳುಗಳನ್ನು ಪಟ್ಟಿ ಮಾಡುತ್ತ ಹೋದರೆ, ಅದೇ ಒಂದು ಪುಸ್ತಕವಾದೀತು. ಬಿಪಿನ್ ಚಂದ್ರ ಮತ್ತು ಮೃದುಲಾ ಮುಖರ್ಜಿ ವಿರಚಿತ, ದೆಹಲಿ ವಿಶ್ವವಿದ್ಯಾಲಯದ ಇತ್ತೀಚಿನ ಪಠ್ಯಪುಸ್ತಕದಲ್ಲಿ ಭಗತ್‌ಸಿಂಗ್ ಕ್ರಾಂತಿಕಾರೀ ಭಯೋತ್ಪಾದಕ ಎಂದು ಚಿತ್ರಿಸಿರುವುದು ಶೈಕ್ಷಣಿಕ ವಲಯದಲ್ಲಿ ಅಲ್ಲೋಲ ಕಲ್ಲೋಲವನ್ನೇ ಉಂಟುಮಾಡಿದೆ.

ಈ ರೀತಿ ಇತಿಹಾಸವನ್ನು ವಿರೂಪಗೊಳಿಸುವ ಪ್ರಯತ್ನ ಇಂದು ನೆನ್ನೆಯದಲ್ಲ. ಪಂಡಿತ ನೆಹರೂ ಕಾಲದಲ್ಲಿಯೇ ಕಾಂಗ್ರೆಸ್ ಸರ್ಕಾರ ತನ್ನ ಓಲೈಕೆಯ ನೀತಿಯನ್ನು ಗಟ್ಟಿಗೊಳಿಸಲು ನಿರ್ಣಯ ಮಾಡಿ 'ಭಾರತೀಯ ಇತಿಹಾಸ ಸಂಶೋಧನಾ ಪರಿಷತ್' ICHR ಹಾಗೂ ಪಠ್ಯಪುಸ್ತಕ ರಚನೆಯ ಹೊಣೆಹೊತ್ತ NCERT ಎಂಬ ಸಂಸ್ಥೆಯನ್ನು ಹುಟ್ಟುಹಾಕಿ ಅದರಲ್ಲಿ ತನ್ನ ಪರವಾದ ಎಡಪಂಥೀಯ ಇತಿಹಾಸಕಾರರನ್ನು ತುಂಬಿತು. ಈ ಪುಣ್ಯಾತ್ಮರು ಬರೆದ ಪುಸ್ತಕಗಳನ್ನೇ ಇಂದಿಗೂ ನಮ್ಮ ಮಕ್ಕಳು ಓದುತ್ತಿರುವುದು.

ಈ ಕಾಂಗ್ರೆಸ್ ಮತ್ತು ಕಮ್ಯುನಿಸ್ಟ್ ಇತಿಹಾಸಕಾರರಿಗೆ ನೈಜ ಇತಿಹಾಸದ ಅರಿವಿರಲಿಲ್ಲ ಎಂದಲ್ಲ. ಆದರೆ ಅದನ್ನು ತಿಳಿಸುವುದು ಅವರಿಗೆ ಬೇಕಿರಲಿಲ್ಲ.

## ಹಾಗಾದರೆ ನೈಜ ಇತಿಹಾಸವೇನು?

**ಅಮೆರಿಕೆಯ ಖ್ಯಾತ ಇತಿಹಾಸಕಾರ, ತತ್ವಜ್ಞಾನಿ ವಿಲ್‌ಡ್ಯೂರಂಟ್ ಬರೆಯುತ್ತಾನೆ,**

"ಭಾರತ ವಿಶ್ವದ ನಾಗರೀಕತೆಯ ತೊಟ್ಟಿಲು ಮತ್ತು ಸಂಸ್ಕೃತ ಯುರೋಪಿಯನ್ ಭಾಷೆಗಳ ತಾಯಿ, ನಮ್ಮ ತತ್ವಜ್ಞಾನದ ಮೂಲ ಸ್ರೋತವೂ ಅವಳೇ, ಅರಬರ ಮೂಲಕ ಗಣಿತವನ್ನು ಕಲಿಸಿದ ತಾಯಿ, ಬುದ್ಧನ ಮೂಲಕ ಶಾಂತಿ ಬೋಧಿಸಿದ ಗುರು, ಹಳ್ಳಿಗಳ ಮೂಲಕ ಸ್ವಾವಲಂಬನೆಯನ್ನು ತೋರಿಸಿದ ಮಾರ್ಗದರ್ಶಕಿ ಭಾರತವೇ. ಭಾರತಮಾತೆ ಸತ್ಯವಾಗಿಯೂ ಇಡೀ ವಿಶ್ವದ ತಾಯಿ!"

**ಭಾರತದ ಆತ್ಮವನ್ನು ಹೊಸಕಿಹಾಕಲು ಪ್ರಯತ್ನಿಸಿದ ಲಾರ್ಡ್ ಮೆಕಾಲೆ ಏನು ಹೇಳುತ್ತಾನೆ ನೋಡಿ!**

"ಕ್ರಿಸ್ತನ ಉಗಮವಾಗುವುದಕ್ಕಿಂತ ಮುಂಚೆ, ಯಾವಾಗ ಯುರೋಪಿಯನ್ನರು ಇನ್ನೂ ಬಣ್ಣ ಬಳಿದುಕೊಂಡು ಕಾಡಿನಲ್ಲಿ ಅಲೆಮಾರಿಗಳಾಗಿ ಬದುಕುತ್ತಿದ್ದಾರೋ, ಆ ಕಾಲದಲ್ಲೇ ಭಾರತದ ಮೂಲೆ ಮೂಲೆಯಲ್ಲಿಯೂ ನಾಗರೀಕತೆಯು ಔನ್ನತ್ಯ ವಿಜೃಂಭಿಸುತ್ತಿತ್ತು"

**ಚೀನಾದ ವಿದ್ವಾಂಸ– ಲಿಂಗ್ ಯು–ತಾಂಗ್‌ನ ಈ ಹೇಳಿಕೆಯನ್ನು ಗಮನಿಸಿ**

"ಧರ್ಮ ಮತ್ತು ಕಾಲ್ಪನಿಕ ಸಾಹಿತ್ಯದಲ್ಲಿ ಚೀನಾಕ್ಕೆ ಭಾರತವೇ ಮೊದಲಗುರು ಮತ್ತು ಟ್ರಿಗ್ನೋಮೆಟ್ರಿ, ವರ್ಗಸಮೀಕರಣ, ವ್ಯಾಕರಣ, ನೀತಿ ಕಥೆಗಳು, ಚದುರಂಗ ಹಾಗೂ ತಾತ್ವಿಕ ಚಿಂತನೆಗಳಲ್ಲಿ ಭಾರತ ಇಡೀ ವಿಶ್ವಕ್ಕೆ ಗುರುಸ್ಥಾನದಲ್ಲಿ ನಿಲ್ಲುತ್ತದೆ".

**ಬ್ರಿಟಿಷ್ ವಿದ್ವಾಂಸ ಸರ್ ಚಾರ್ಲ್ಸ್ ಎಲಿಯಟ್ ಬರೆದಿರುವುದನ್ನು ಓದಿರಿ.**

ಪುಟ 9 ಕ್ಕೆ ➤

➢ ಪುಟ 8 ರಿಂದ..... ಚರಿತ್ರೆಯ ಕಲಿಕೆ ...

"ಭಾರತದ ಸ್ಥಾನಮಾನದ ಬಗ್ಗೆ ಯುರೋಪ್ ಇತಿಹಾಸ ಕಾರರು ಅಪೂರ್ಣವಾಗಿ ಬರೆದಿದ್ದಾರೆ" ಕೇವಲ ತಮ್ಮ ಗೆಲುವುಗಳನ್ನು, ಅನ್ಯದೇಶಗಳ ಮೇಲಿನ ಆಕ್ರಮಣಗಳನ್ನೇ ವೈಭವೀಕರಿಸುತ್ತಾ, ನೈಜವಾಗಿ ತಮ್ಮ ಜನರೇ ಉಳಿದ ಭೂಭಾಗಗಳಿಂದ ಬೇರ್ಪಟ್ಟು ಅಶಕ್ತರಾಗಿದ್ದರೆಂಬ ಸತ್ಯವನ್ನು ಬಚ್ಚಿಟ್ಟಿದ್ದಾರೆ. ಆದರೆ ಹಿಂದೂಗಳು ವಿಶ್ವದಾದ್ಯಂತ ಮೆರೆದ ಬೌದ್ಧಿಕ ವಿಜಯವನ್ನು ಪರಿಗಣಿಸಿಯೇ ಇಲ್ಲ. ಮೇಲಾಗಿ ಭಾರತೀಯರ ರಾಜಕೀಯ ಇಂತಹ ವಾಣಿಜ್ಯಕ ವಿಜಯಗಳಿಗೆ ಹೋಲಿಸಿದರೆ ಭಾರತೀಯರ ವೈಚಾರಿಕತೆಯ ವಿಜಯವು ಅತ್ಯುನ್ನತ ಮಟ್ಟದ್ದಾಗಿದೆ.

ಮಾನವ ಸಂಸ್ಕೃತಿಯ ಇತಿಹಾಸದಲ್ಲಿ ಎಲ್ಲಾ ಕ್ಷೇತ್ರಗಳಲ್ಲೂ ಭಾರತದ ಕೊಡುಗೆ ಅಪಾರ. ಗೃಹೋಪಯೋಗಿ ಕೋಳಿ ಸಾಕಣೆ, ಶುದ್ಧ ಅರಗು, ನಿಂಬೆ, ಅತ್ತಿ, ಸಕ್ಕರೆ, ದಾಲ್ಚಿನ್ನಿ, ಮೆಣಸು, ಚದುರಂಗ– ಪೋಲೋ ನಂತಹ ಕ್ರೀಡೆ '0' ದಶಮಾಂಶ ಪದ್ಧತಿ, ನೀತಿಕಥೆಗಳು ಇನ್ನೂ ಮುಂತಾದ ಅದ್ಭುತ ಕರಕುಶಲ ವಸ್ತುಗಳು ಮತ್ತು ತತ್ವಜ್ಞಾನದ ಚಿಂತನೆಗಳು, ಧಾರ್ಮಿಕ ವಿಚಾರಗಳು–ಇವೆಲ್ಲವೂ ಭಾರತದಿಂದಲೇ ಬಂದಿವೆ ಎಂದು ಖ್ಯಾತ ವಿದ್ವಾಂಸ ವಿಲಿಯನ್ ಗಿಲ್ಬರ್ಗ್ ದಾಖಲಿಸುತ್ತಾರೆ.

ಭಾರತದ ನೈಜ ಚರಿತ್ರೆಯನ್ನು ತಿರುಚಲು ಕಾರಣಕರ್ತನಾದ ಮತ್ತೋರ್ವ ಪಾಶ್ಚಿಮಾತ್ಯ ವಿದ್ವಾಂಸ ಪ್ರೊ॥ ಮ್ಯಾಕ್ಸ್ ಮುಲ್ಲರ್ ತನ್ನದೊಂದು ಪುಸ್ತಕ **'INIDA-What Can It Teach Us'** ಎಂಬುದರಲ್ಲಿ ಭಾರತದ ಹಿರಿಮೆಯನ್ನು ಈ ರೀತಿ ದಾಖಲಿಸುತ್ತಾನೆ.

"ಇಡೀ ವಿಶ್ವದಲ್ಲಿ ಪ್ರಕೃತಿ ನೀಡಬಹುದಾದ ಎಲ್ಲ ಸಂಪತ್ತು ಸೌಂದರ್ಯಗಳಿಂದ ಕೂಡಿ ವರ್ಗಸಮಾನವಾದ ದೇಶವೊಂದಿದ್ದರೆ ಅದು ಭಾರತ. ಮಾನವನ ಬೌದ್ಧಿಕ ಮಟ್ಟ ಅತ್ಯುನ್ನತವಾಗಿದ್ದು, ವಿಜ್ಞಾನದ ಅನೇಕ ಸಂಶಯಗಳಿಗೆ ಪರಿಹಾರ ನೀಡಿದ ದೇಶವಿದ್ದರೆ ಅದು ಭಾರತ. ಜೊತೆಗೆ ತನ್ನ ಪ್ರಭಾವದಿಂದ ಯುರೋಪಿಯನ್ನರ ಸಾಹಿತ್ಯ, ಗ್ರೀಕ್– ರೋಮನ್ನರ ಸಾಹಿತ್ಯವನ್ನು ಪರಿಪೂರ್ಣವಾಗಿ ಬೆಳೆಸಿದ ದೇಶವಿದ್ದರೆ ಅದೂ ಕೂಡ ಭಾರತ."

ಜಪಾನ್ ದೇಶದ ಪ್ರೊ॥ ಹೆಚ್. ನಾಕಾಮುರ ಅವರ ಮಾತುಗಳಲ್ಲಿ ಭಾರತ ಹಿರಿಮೆಯನ್ನು ತಿಳಿಯಿರಿ "ಸಾಂಸ್ಕೃತಿಕವಾಗಿ ಜಪಾನಿನ ತಾಯಿ ಭಾರತವೇ . ಶತಶತಮಾನಗಳಿಂದ ಭಾರತ ತನ್ನ ವಿಚಾರ ಮತ್ತು ಸಂಸ್ಕೃತಿಗಳಿಂದ ಜಪಾನನ್ನು ಶ್ರೀಮಂತಗೊಳಿಸಿದೆ."

ಇನ್ನಾದರೂ ನಾವು ಚರಿತ್ರೆಯಲ್ಲಿನ ವಿಕೃತಿಯ ಧೂಳನ್ನು ಒರೆಸಿ ನಮ್ಮ ಮಕ್ಕಳಿಗೆ ಭಾರತದ ಶೌರ್ಯ, ಪರಾಕ್ರಮ, ಬೌದ್ಧಿಕ ಉನ್ನತೆ ಸಂಸ್ಕೃತಿಯ ಸೌಗಂಧ, ವೈಜ್ಞಾನಿಕ ಆವಿಷ್ಕಾರಗಳ ಸತ್ಯದರ್ಶನ ಮಾಡಿಸೋಣ. ಆಗ ನೋಡಿ ನಮ್ಮ ಮುಂದಿನ ಪೀಳಿಗೆ 'ನಾನು ಭಾರತೀಯ, ಮಹಾನ್ ಇತಿಹಾಸದ ವಾರಸುದಾರ' ಎಂದು ಎದೆಯುಬ್ಬಿಸಿ ಹೆಮ್ಮೆಯಿಂದ ಬೀಗುತ್ತಾರೆ.

**ಈ ರೀತಿ ಭಾರತದ ಹಿರಿಮೆ ಗರಿಮೆಯನ್ನು ಸಾರುವ ಒಂದಾದರೂ ಸಂಗತಿ ನಮ್ಮ ಪಠ್ಯಪುಸ್ತಕಗಳಲ್ಲಿದೆಯೇ?**

# ರೈಲ್ವೆ ತುಣುಕು

**ಜಿ.ಎಸ್. ಕೃಷ್ಣಮೂರ್ತಿ**

ನಮ್ಮಲ್ಲಿ ಬಹುತೇಕ ಜನರು ಒಂದಲ್ಲಾ ಒಂದು ಸಲ ರೈಲಿನಲ್ಲಿ ಪ್ರಯಾಣಿಸಿದ್ದೇವೆ. ಆದರೆ ನಮ್ಮಲ್ಲಿ ಬಹುಜನ ಈ ಕೆಳಕಂಡ ಆಶ್ಚರ್ಯ ಸಂಗತಿಗಳನ್ನು ಗಮನಿಸದೇ ಇರಬಹುದು. ಅಂತಹುದರಲ್ಲಿ ಕೆಲವು.

1. ಹೊಸದೆಹಲಿಯಿಂದ ಭೂಪಾಲ್‌ಗೆ ಪ್ರಯಾಣಿಸುವ ಶತಾಬ್ದಿ ಎಕ್ಸ್‌ಪ್ರೆಸ್ ಭಾರತದಲ್ಲಿ ಅತ್ಯಂತ ವೇಗವಾಗಿ ಸಂಚರಿಸುವ ರೈಲು. ಇದರ ಸರಾಸರಿವೇಗ 91 ಕಿ.ಮಿ. ಆದರೆ ಅದರ ಅತ್ಯಂತ ಹೆಚ್ಚಿನ ವೇಗ ದೆಹಲಿಯಿಂದ ಆಗ್ರದವರೆಗಿನ 195 ಕಿ.ಮಿ ಮಾರ್ಗದಲ್ಲಿ 150 ಕಿ.ಮಿ ವೇಗದಲ್ಲಿ ಚಲಿಸುತ್ತದೆ. ದೇಶದಲ್ಲೇ ಅತ್ಯಂತ ಕಡಿಮೆ ಸರಾಸರಿ ವೇಗ ಗಂಟೆಗೆ 10 ಕಿ.ಮಿ ದಕ್ಷಿಣಭಾರತದ ನೀಲಗಿರಿ ಎಕ್ಸ್‌ಪ್ರೆಸ್.

   ಇದೀಗ ದೆಹಲಿಯಿಂದ ಆಗ್ರಾಕ್ಕೆ ಹೋಗುವ ಗತಿಮಾನ್ ಎಕ್ಸ್‌ಪ್ರೆಸ್ ಸರಾಸರಿ ವೇಗ 112 ಕಿ.ಮಿ ಹಾಗೂ ಅತಿ ಹೆಚ್ಚಿನ ವೇಗ 160 ಕಿ.ಮಿ ಆಗಿದ್ದು ಶತಾಬ್ದಿ ಎಕ್ಸ್‌ಪ್ರೆಸ್ ಅನ್ನು 2ನೇ ಸ್ಥಾನಕ್ಕೆ ಹಿಂದೂಡಿದೆ.

2. ಅಸ್ಸಾಮಿನ ಧಿಬ್ರೂಗರ್‌ನಿಂದ ಕನ್ಯಾಕುಮಾರಿಗೆ ಇರುವ ದೂರ 4273ಕಿ.ಮಿ ಇದು ಭಾರತದಲ್ಲೇ ಅತಿ ಉದ್ದ ಹಳಿ ಮಾರ್ಗ. ನಾಗಪುರ ಹಾಗೂ ಅಜ್ನಿ ನಡುವೆ ಇರುವ 3 ಕಿ.ಮಿ ಅಂತರ ಅತ್ಯಂತ ಕಡಿಮೆ ದೂರ.

3. ತಿರುವನಂತಪುರದಿಂದ ನಿಜಾಮ್ ಉದ್ದೀನ್‌ಗೆ ಚಲಿಸುವ ರಾಜಧಾನಿ ಎಕ್ಸ್‌ಪ್ರೆಸ್ ವಡೋದರ ಹಾಗೂ ಕೋಟಾ ನಡುವಿನ ಅಂತರ 528 ಕಿ.ಮಿನಲ್ಲಿ ಯಾವ ತಡೆಯೂ ಇಲ್ಲದಂತೆ ಚಲಿಸುತ್ತದೆ. ಅಮೃತಸರ – ಹೌರಾ ನಡುವಿನ ಅಂತರ 1922 ಕಿ.ಮಿ. ಈ ಮಾರ್ಗದಲ್ಲಿ ಅಮೃತಸರ ಹೌರಾ ಎಕ್ಸ್‌ಪ್ರೆಸ್ 115 ನಿಲುಗಡೆ ಹೊಂದಿದೆ.

4. ಗೌಹತಿ–ತಿರುವನಂತಪುರ ಎಕ್ಸ್‌ಪ್ರೆಸ್ ನಂಬಲನರ್ಹವಾದ ಅತಿ ದೂರ ಪ್ರಯಾಣದ ರೈಲು. ಈ ರೈಲಿಗೆ ನಿಗದಿತ ವೇಳೆ 65 ಗಂಟೆ 5 ನಿಮಿಷ. ಇದು ಸಾಮಾನ್ಯವಾಗಿ 10–12 ಗಂಟೆಗಳ ಕಾಲ ತಡ.

5. Venkatanarasimharajvaripeta, ಚೆನ್ನೈನ ಹತ್ತಿರ ಇರುವ ಅರಕೋಣಮ್ ಮತ್ತು ರೇಣಿಗುಂಟ ರೈಲ್ವೆ ನಿಲ್ದಾಣ ಅತಿ ಹೆಚ್ಚಿನ ಅಕ್ಷರಗಳನೊಳಗೊಂಡಿವೆ (27 ಅಕ್ಷರ). ಹಾಗೆಯೇ ಅತೀ ಕಡಿಮೆ ಅಕ್ಷರಗಳುಳ್ಳ ರೈಲ್ವೆ ನಿಲ್ದಾಣಗಳು Ib ಒರಿಸ್ಸಾದ ಜರಸುಗುಡ ಮತ್ತು od (2 ಅಕ್ಷರ) ಗುಜರಾತ್‌ನ ಆನಂದ ಹತ್ತಿರ ಇವೆ.

6. ಅತ್ಯಂತ ಉದ್ದ ಸುರಂಗ ಹಳಿ ಮಾರ್ಗ 11.215 ಕಿ.ಮಿ ಜಮ್ಮು, ಕಾಶ್ಮೀರದ ಪೀರ್‌ಪಂಜಲ್‌ನಲ್ಲಿ ಇದೆ. ಇದು 2012 ಡಿಸೆಂಬರ್‌ನಲ್ಲಿ ಉದ್ಘಾಟನೆ ಆಯಿತು.

# ವಿದ್ಯಾರ್ಥಿ ಮಿತ್ರ – 24





## ಪದಬಂಧ

ಎಡದಿಂದ ಬಲಕ್ಕೆ

1. ಚಂದ್ರನು ಎಂದೂ ಸೋಮಾರಿಯಲ್ಲ (2)
3. ಕೆಲವರು ಇದನ್ನು ನೋಡಿ ಮಣೆ ಹಾಕುತ್ತಾರೆ (2)
4. ಇದು ಹೆಚ್ಚಾದರೆ ಗತಿ ಕೇಡಾಗುತ್ತದೆ (2)
5. ಮಲಗುವಾಗ ಇದು ಇದ್ದಷ್ಟೇ ಕಾಲು ಚಾಚಬೇಕು (3)
7. ಮೂಡಲ್ ಕುಣಿಗಲ್ ಕೆರೆಯು ಈ ಹಣ್ಣಿನಂತೆ ತುಂಬಿದೆ (2)
9. ಇದು ಸಿಹಿಯಾದ ನುಡಿ (4)
10. ಇವಳು ಬೇರೆಯವಳಲ್ಲ ಸ್ವಂತ ಸಹೋದರಿ (4)
11. ಸರಸರನೆ ಹರಿದ ದ್ರವ (2)
13. ಮಾನವನಲ್ಲಿ ಈ ಬಂಧು ಇದ್ದಾನೆ (2)
14. ದನ ಕಾಯುವವನಲ್ಲ ಮನ್ಮಥ (3)
14. ಯಜಮಾನನಿಗೆ ಸಿಕ್ಕ ಗೆಲುವು (3)
16. ವಸತಿಯಲ್ಲಿ ಇದು ಸಿಕ್ಕಿದೆ (2)
18. ಅನುಮಾನದಿಂದ ಹಾಡಿದ್ದಲ್ಲ, ಇದು ಪ್ರೀತಿ (4)
20. ಚಂದಮಾಮ ಇವನಿಂದ ಬೆಳಕು ಪಡೆಯುತ್ತಾನೆ (4)
22. ಇವಳು ಮನ್ಮಥನ ಹೆಂಡತಿ (2)
23. ಸರೋವರದಲ್ಲಿವಳು ಜನಿಸಿದಳು (3)
24. ಗರಗರ ತಿರುಗತ್ತೆ ಈ ಗ್ರಹ (2)
25. ನಾರುಮಡಿ ಉಟ್ಟಿಲ್ಲ ಈ ಮಹಿಳೆ (2)
26. ಪ್ರಯತ್ನದಿಂದ ಈ ಮಣಿ ಸಿಗುತ್ತದೆ (2)

ಮೇಲಿಂದ ಕೆಳಕ್ಕೆ

2. ಇವ ಬಲು ಬುದ್ಧಿವಂತ (5)
3. ಅಮಾಯಕ ಮನುಷ್ಯ (5)
4. ವೈಶಾಲ್ಯತೆಗೆ ಆದರ್ಶ ಗಗನ (3)
6. ಒಲವು ಇದ್ದರೆ ಜಯ ನಿಶ್ಚಿತ (3)
8. ಬಡಗಿ ಚೆಲುವೆಯನ್ನು ನಿರ್ಮಿಸಿದ್ದಾನೆ (3)
12. ಕ್ಷಣಕ್ಷಣವು ಮಿಂಚಿನಂತೆ ಮಾಯ (3)
13. ಇವ ನವ ಮಾವ ಅಲ್ಲ ಮನುಷ್ಯ (3)
15. ವಿಶ್ವದ ತಾಯಿ ಈ ಮಾತೆ (5)
17. ಇದು ಬಾಣಗಳಿಂದ ಮಾಡಿದ ಬುಟ್ಟಿ (5)
18. ಮರ ಸದಾ ಶಾಶ್ವತ (3)
19. ಹಸು ಮಾಡಿದ ಕಸುವು ಪ್ರತಾಪ (3)
21. ಕರಕರ ಹಲ್ಲು ಕಡಿದ ಮೊಸಳೆ (3)



– ವಿ. ರಾಜ, ಅಧ್ಯಾಪಕರು, ನ್ಯಾಷನಲ್ ಹೈಸ್ಕೂಲ್, ಬೆಂಗಳೂರು

### ವಿದ್ಯಾರ್ಥಿ ಮಿತ್ರ 24 ರ ಉತ್ತರ

ಎಡದಿಂದ ಬಲಕ್ಕೆ

| | | | | |
|---|---|---|---|---|
| 1. ಸೋಮ | 3. ಮುಖ | 4. ಆಸೆ | 5. ಹಾಸಿಗೆ | 7. ನಿಂಬೆ |
| 9. ಸವಿಮಾತು | 10. ನನ್ನತಂಗಿ | 11. ರಸ | 13. ಮಾವ | 14. ಮದನ |
| 15. ಜಯ | 16. ವಶ | 18. ಅನುರಾಗ | 20. ರವಿಮಾಮ | 22. ರತಿ |
| 23. ಸರೋಜ | 24. ಗರ | 25. ನಾರಿ | 26. ರತ್ನ | |

ಮೇಲಿನಿಂದ ಕೆಳಕ್ಕೆ

| | | | |
|---|---|---|---|
| 2. ಮಹಾಚತುರ | 3. ಮುಗ್ಧ ಮಾನವ | 4. ಆಗಸ | 6. ಗೆಲುವು |
| 8. ಬೆಡಗಿ | 12. ಸಮಯ | 13. ಮಾನವ | 15. ಜಗದೀಶ್ವರಿ |
| 17. ಶರಪಂಜರ | 18. ಅಮರ | 19. ಸಾಹಸ | 21. ಮಕರ |



ಶಾಶ್ವತವಾದ ತುಷ್ಟೀಕರಣದ ನೀತಿಗಿಂತ ಮೂರ್ಖತೆ ಇನ್ನೊಂದಿಲ್ಲ, ಮಿತಿಯಿಲ್ಲದ ಬೇಡಿಕೆಗಳು ಹಾಗೂ ಎಂದೂ ತೃಪ್ತಿಪಡಿಸಲಾಗದ ತುಷ್ಟೀಕರಣ – ಇದೇ ಈ ನೀತಿಯ ಅಂತಿಮ ಗುರಿ.

ಹಿಂಸಾಚಾರಕ್ಕೆ ಶರಣಾಗಿ ಗಳಿಸಿದ ಶಾಂತಿ ನಿಜಕ್ಕೂ ಶಾಂತಿ ಎನಿಸದು. ಅದು ಆತ್ಮಘಾತುಕತನ ಮಾತ್ರವಲ್ಲ, ಗೌರವ ಸಂಪನ್ನ ಮಾನವೀಯ ಬದುಕಿಗೆ ಅಗತ್ಯವೆನಿಸುವ ಎಲ್ಲ ಉದಾತ್ತ ಸಂಗತಿಗಳನ್ನು ಬರ್ಬರತೆಯ ಹಾಗೂ ಮೃಗೀಯ ಶಕ್ತಿಗಳ ಮುಂದೆ ಬಲಿಕೊಡುವಂತಹ ಕೃತ್ಯ ಅದು.

# ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ

# ಮನವಿ

**ಆತ್ಮೀಯ ಶಿಕ್ಷಕ ಬಂಧುಗಳೇ,**

2010ರಲ್ಲಿ ವಾಯುವ್ಯ ಕ್ಷೇತ್ರದಿಂದ ಶಿಕ್ಷಕ ಬಂಧುಗಳು ಶ್ರೀ ಅರುಣ್ ಶಹಾಪೂರ್ ಅವರನ್ನು ಶಿಕ್ಷಕ ಪ್ರತಿನಿಧಿಯಾಗಿ ವಿಧಾನ ಪರಿಷತ್‌ಗೆ ಆಯ್ಕೆ ಮಾಡಿರುತ್ತೀರಿ. ಕಳೆದ ಆರು ವರ್ಷಗಳಲ್ಲಿ ಶ್ರೀ ಅರುಣ ಶಹಾಪೂರರು ಮಾಡಿದ ಕಾರ್ಯಗಳನ್ನು ತಾವೇ ಗಮನಿಸಿದ್ದೀರಿ. ಈ ಅವಧಿಯಲ್ಲಿ ಅವರು ಮಾಡಿದ ಕಾರ್ಯಗಳು ತೃಪ್ತಿದಾಯಕ. ಆದ್ದರಿಂದ ಅರುಣ್ ಶಹಾಪೂರರನ್ನು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಬೆಂಬಲಿಸುತ್ತದೆ. ಇದೇ ಜೂನ್ 9 ಗುರುವಾರದಂದು ನಡೆಯುವ ಶಿಕ್ಷಕ ಪ್ರತಿನಿಧಿ ಚುನಾವಣೆಯಲ್ಲಿ ನಮ್ಮೆಲ್ಲ ಶಿಕ್ಷಕ ಮಿತ್ರರು ಶ್ರೀ ಅರುಣ ಶಹಾಪೂರರನ್ನು ಪ್ರಥಮ ಪ್ರಾಶಸ್ತ್ಯ ಮತವನ್ನು ನೀಡಿ ಗೆಲ್ಲಿಸಬೇಕಾಗಿ ವಿನಂತಿಸಿಕೊಳ್ಳುತ್ತೇವೆ.



**ಪ್ರೊ. ಕೃ. ನರಹರಿ**
ಮೂರು ಬಾರಿ ಶಿಕ್ಷಕರನ್ನು ಪ್ರತಿನಿಧಿಸಿದ ಶಾಸಕರು. ಮಾಧ್ಯಮಿಕ ಶಿಕ್ಷಕ ಸಂಘದ ಮಹಾ ಪೋಷಕರು



**ಪ್ರೊ. ಕೆ. ಬಾಲಕೃಷ್ಣ ಭಟ್**
ಎರಡು ಬಾರಿ ಶಿಕ್ಷಕರನ್ನು ಪ್ರತಿನಿಧಿಸಿದ ಶಾಸಕರು.
ಶಿಕ್ಷಕ ಸಂಘದ ರಾಜ್ಯ ಅಧ್ಯಕ್ಷರು



**ಶ್ರೀ ಶಿವಾನಂದ ಸಿಂಧನೇಕರಾ**
ಪ್ರಧಾನ ಕಾರ್ಯದರ್ಶಿ
ಮಾಧ್ಯಮಿಕ ಶಿಕ್ಷಕ ಸಂಘ

## ನನ್ನ ಮನವಿ



ಭಾರತದ ಸರ್ವತೋಮುಖ ಪ್ರಗತಿಗೆ ಶಿಕ್ಷಣ ಮೂಲಧಾರ, ಶಿಕ್ಷಕ ಅದರ ಆಧಾರ ಮತ್ತು ರಾಷ್ಟ್ರದ ಏಕಾತ್ಮತೆಯ ನಿರ್ಮಾಪಕ. ಮಕ್ಕಳಿಗೆ ಸತ್ವ ಪೂರ್ಣ ನೀತಿಯುಕ್ತ ಶಿಕ್ಷಣವನ್ನು ನೀಡಲು ಸೂತ್ರಬದ್ಧ ಸಂಘಟಿತ ಪ್ರಯತ್ನ, ಅನಿವಾರ್ಯ. ಶಿಕ್ಷಣ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲ ಶಿಕ್ಷಕರು ಸಮಾಜ ಪರಿವರ್ತನೆಯ ಹರಿಕಾರರು. ಶಿಕ್ಷಕ– ಶಿಕ್ಷಣ–ಸಮಾಜ ಇವು ಒಂದಕ್ಕೊಂದು ಪೂರಕ ಶಿಕ್ಷಣ ಕ್ಷೇತ್ರ ಸಮಾಜದ ಅಗತ್ಯಕ್ಕನುಗುಣವಾಗಿ ಬದಲಾಗಬೇಕಾಗಿರುವುದು ಇಂದಿನ ಅಗತ್ಯ. ಶಿಕ್ಷಕರ–ಶಿಕ್ಷಣ ಕ್ಷೇತ್ರದ ಸಮಸ್ಯೆ ಹಾಗೂ ಅಭಿವೃದ್ಧಿ ವಿಷಯಗಳನ್ನು ಶಾಸನ ಸಭೆಯಲ್ಲಿ ಹಾಗೂ ಹಲವು ಸರ್ಕಾರಿ ವೇದಿಕೆಗಳಲ್ಲಿ ಪರಿಣಾಮಕಾರಿಯಾಗಿ ಮಂಡಿಸಿ ಪರಿವರ್ತನೆಯನ್ನು ತರಬೇಕಾದ ಹಾಗೂ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಜವಾಬ್ದಾರಿಗಳನ್ನು ಶಿಕ್ಷಕ ಪ್ರತಿನಿಧಿಯಾಗಿ ನಾನು ಪ್ರಾಮಾಣಿಕವಾಗಿ ಮಾಡುತ್ತಿರುವುದು ತಮ್ಮೆಲ್ಲರಿಗೂ ತಿಳಿದ ವಿಷಯ. ನಾನು ಶಿಕ್ಷಣ ಕ್ಷೇತ್ರಕ್ಕೆ ಸಲ್ಲಿಸಬೇಕಾಗಿರುವ ಸೇವೆ ಇನ್ನೂ ಬಹಳಷ್ಟಿದೆ.

ನಾನು ವಿವಿಧ ವೇದಿಕೆಗಳ ಮೂಲಕ ನಿಮ್ಮ ಪರವಾಗಿ ಕಾರ್ಯನಿರತನಾಗಿದ್ದು, ಎಷ್ಟು ಬಾರಿ ತಮ್ಮನ್ನು ಭೇಟಿಯಾದೆ ಎನ್ನುವುದಕ್ಕಿಂತ ಎಷ್ಟು ಪರಿಣಾಮಕಾರಿಯಾಗಿ ತಮ್ಮ ಧ್ವನಿಯಾಗಿದ್ದೇನೆ ಎನ್ನುವುದನ್ನು ತಾವು ಪರಿಗಣಿಸಲು ವಿನಂತಿಸುತ್ತೇನೆ. ಬರಲಿರುವ ದಿನಗಳಲ್ಲಿ ನಾನು ತಮ್ಮನ್ನು ಭೇಟಿಯಾಗಿ ತಮ್ಮೊಂದಿಗೆ ಹಲವು ವಿಷಯಗಳನ್ನು ಹಂಚಿಕೊಳ್ಳುವೆ. ನಿಮ್ಮ ಪ್ರೀತಿ, ವಿಶ್ವಾಸ, ಆಶೀರ್ವಾದ ಎಂದಿನಂತೆ ನನ್ನ ಜೊತೆಗಿರಲಿ. ತಮ್ಮ ವಿಶ್ವಾಸವೇ ನನ್ನ ಪರಿಣಾಮಕಾರಿ ಕಾರ್ಯ ನಿರ್ವಹಣೆಗೆ ಶ್ರೀ ರಕ್ಷೆ.

Registered No. RNI 45459/85 RNP/KA/BGS-125/2015-2017 Posted at Bangalore PSO Bangalore -560 026



# ಅರುಣ್ ಶಹಾಪುರ್
# ಸಾಧನೆಗಳು ಮತ್ತು ಮನವಿ

• ವರ್ಗಾವಣೆ ಕಾಯ್ದೆಗೆ ತಿದ್ದುಪಡಿ 01% ಇದ್ದದ್ದನ್ನು 03% ಗೆ ಹೆಚ್ಚಳ ಮಾಡಿದ್ದು, ಪತಿ–ಪತ್ನಿ ಪ್ರಕರಣದ 2005ರ ತಿದ್ದುಪಡಿ, ಅನುದಾನಿತ ಸಂಸ್ಥೆಯ ಶಾಲೆಗಳ ಶಿಕ್ಷಕರಿಗೂ ಪತಿ–ಪತ್ನಿ ಪ್ರಕರಣಗಳಿಗೂ ಅವಕಾಶ. • ಕಳೆದ ಒಂದೇ ವರ್ಷದಲ್ಲಿ ಮುಖ್ಯೋಪಾಧ್ಯಾಯರ ಭಡ್ತಿಗೆ ಕ್ರಮ ಕೈಗೊಂಡಿದ್ದು. • ಎಕ್ಸ್‌ಗ್ರೇಷಿಯಾ , 300,400,500 ರೂ ಕೊಡಿಸಿದ್ದು. • ಗ್ರಾಮೀಣ ಭಾಗದ ಹೆಚ್.ಆರ್.ಎ ಅನ್ನು 7% ಯಿಂದ 10% ಗೆ ಹೆಚ್ಚಿಸಿದ್ದು. ಹಾಗೂ ಬೆಳಗಾವಿ ಮಹಾ ನಗರಕ್ಕೆ 10% ಯಿಂದ 20% ಗೆ ಹೆಚ್ಚಿಸಿದ್ದು. • 2012 ಡಿಸೆಂಬರ್‌ವರೆಗೂ ಪ್ರೌಢಶಾಲೆಗಳಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿ ಕ್ರಮ. • 2013 ಜೂನ್‌ವರೆಗೆ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿಗೆ ಕ್ರಮ. • ಒಂದು ಘಟಕದಿಂಧ ಇನ್ನೊಂಧು ಘಟಕಕ್ಕೆ ವರ್ಗಾವಣೆಯಾದಾಗ ಸಿಗಬೇಕಾದ ಆರ್ಥಿಕ ಸೌಲಭ್ಯ ದೊರಕಿಸಿಕೊಟ್ಟಿದ್ದು. • 2,3 “ಡಿ” ದರ್ಜೆ ನೌಕರರ ನೇಮಕಾತಿ ಪಟ್ಟಿಗೆ ಅನುಮೋದನೆ ಕೊಡಿಸಿದ್ದು. • ಟಿ.ಜಿ.ಟಿ ಶಿಕ್ಷಕರ ವರ್ಗಾವಣೆಗೆ ಟಿ.ಜಿ.ಟಿ ಶಿಕ್ಷಕರ ಸ್ಥಳದಲ್ಲೇ ನೇಮಕಾತಿಗೆ ಅವಕಾಶ ಕಲ್ಪಿಸಿದ್ದು. • ಬಿ ವೃಂದದ ಶಿಕ್ಷಣಾಧಿಕಾರಿಗಳ ಪದೋನ್ನತಿಗೆ ಕ್ರಮ • ಅತಿಥಿ ಶಿಕ್ಷಕರ ನೇಮಕಾತಿಗೆ ಅವಕಾಶ ಮಾಡಿಸಿಕೊಟ್ಟಿದ್ದು. • ಶಾಶ್ವತ ಶಿಕ್ಷಕರ ನೇಮಕಾತಿಗೆ ಅವಕಾಶ ಮಾಡಿಸಿಕೊಟ್ಟಿದ್ದು. • ಪಿ.ಯು.ಸಿ ಉಪನ್ಯಾಸಕರಿಗೆ ಬಿ.ಎಡ್ ಮಾಡಲು ಅವಕಾಶ ಮಾಡಿಸಿಕೊಟ್ಟಿದ್ದು. • ಪಾಲಿಟೆಕ್ನಿಕ್ ಉಪನ್ಯಾಸಕರ ಸಂಬಳವನ್ನು 100% ಮಾಡಿದ್ದು. • ಪದವಿ ಕಾಲೇಜುಗಳ ಡಬಲ್ ಸ್ಟ್ಯಾಂಡರ್ಡ್ ಫೀಸ್ ಸಮಸ್ಯೆ ಪರಿಹರಿಸಿದ್ದು. • ಡಿ.ಎಡ್ ಕಾಲೇಜು ವೇತನ ತಾರತಮ್ಯ ಪರಿಹರಿಸಿದ್ದು. • ಕಾಲಕಾಲಕ್ಕೆ ಮೌಲ್ಯಮಾಪನ ಭತ್ಯೆ, ಪರೀಕ್ಷಾ ಸಂಭಾವನೆ ಹೆಚ್ಚಳ • ಮೊರಾರ್ಜಿ ಶಿಕ್ಷಕರ ಸೇವಾ ಸಕ್ರಮಾತಿ • ಆದರ್ಶ ಶಾಲೆಗಳಲ್ಲಿ ಮತ್ತು ಆರ್.ಎಂ.ಎಸ್.ಎ ಶಾಲೆಗಳಲ್ಲಿ ಪ್ರೌಢ ಶಾಲೆಗಳಲ್ಲಿ 100 ವಿದ್ಯಾರ್ಥಿಗಳಿದ್ದ ಲ್ಲಿ ದೈಹಿಕ ಶಿಕ್ಷಕರ ನೇಮಕಾತಿ ಹಾಗೂ ಸಿ &ಆರ್ ನಿಯಮಾವಳಿ ತಿದ್ದುಪಡಿಗೆ ಕ್ರಮ • ಜೆ.ಒ.ಸಿ ಶಿಕ್ಷಕರ ಸೇವಾ ಸಕ್ರಮಾತಿ • ಇಂಜಿನಿಯರಿಂಗ್ ಪಾಲಿಟೆಕ್ನಿಕ್ ಶಿಕ್ಷಕರಿಗೆ ಎಯಸಿಟಿ ಸ್ಕೇಲ್ ಕೊಡಿಸಿರುವುದು. • ಮಹಿಳೆಯರ ಹೆರಿಗೆ ರಜೆಯನ್ನು 180 ದಿನಗಳಿಗೆ ಹೆಚ್ಚಿಸಿದ್ದು • ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆ ಯ ಸುಧಾರಣೆಗೆ ಕ್ರಮ • ಐ.ಟಿ.ಯ ಶಿಕ್ಷಕರ ಥಾಮಸ್ ವರದಿಯನ್ನು ಜಾರಿಗೆ ತಂದಿದ್ದು • ಪ್ರೌಢ, ಪದವಿ ಪೂರ್ವ , ಪದವಿ ಕಾಲೇಜು ಹಾಗೂ ವಿಶ್ವವಿದ್ಯಾಲಯಗಳಿಗೆ ಮೂಲಭೂತ ಸೌಲಭ್ಯ ಒದಗಿಸಲು ಆಯಾ ಸಾಂಧರ್ಭಿಕ ಪ್ರಯತ್ನ. • ಚಿಕ್ಕೋಡಿಗೆ ಒಂದು ಡಯಟ್ ಸೃಜನೆ • ದೈಹಿಕ ಶಿಕ್ಷಣಾಧಿಕಾರಿಗಳ ಸೇವಾ ಸಮಸ್ಯೆಗಳ ಪರಿಹರಿಸಲು ಆಡಳಿತಾತ್ಮಕ ಆದೇಶ ಮಾಡಿಸಿದ್ದು • ಕಾನೂನು ಕಾಲೇಜುಗಳಿಗೆ ಅನುದಾನ ಒದಗಿಸಲು ಕ್ರಮ ಕೈಗೊಂಡಿದ್ದು. • ಪರಿಹಾರ ಭೋಧನೆ ರದ್ದು ಮಾಡಿರುವುದು.

ಈ ಹಿಂದಿನ ಹಿರಿಯ ವಿಧಾನ ಪರಿಷತ್ ಸದಸ್ಯರಿಗಿಂತ ಹೆಚ್ಚಿನ ಹೋರಾಟವನ್ನು ನಾನು ಕೈಗೊಂಡು ತಮ್ಮ ಸಮಸ್ಯೆಗಳ ಪರಿಹಾರಕ್ಕಾಗಿ ಕಾರ್ಯ ನಿರ್ವಹಿಸುತ್ತಿದ್ದು, ಸದನದಲ್ಲಿ ಪ್ರಶ್ನೆಗಳನ್ನು ಕೇಳುವ ಮೂಲಕ, ಪತ್ರಿಕಾ ಘೋಷ್ಠಿ ನಡೆಸುವ ಮೂಲಕ ಇನ್ನಿತರೆ ಎಲ್ಲ ರೀತಿಯ ಕಾರ್ಯಗಳಿಂದ ಮುಂದೆ ಸಾಗುತ್ತಿದ್ದೇನೆ. ಇನ್ನು ಅನೇಕ ಸಮಸ್ಯೆಗಳು ಪರಿಹಾರದ ಹಂತದಲ್ಲಿದ್ದು ಹಾಗೂ ತಮ್ಮ ಸಮಸ್ಯೆಗಳೇನಾದರೂ ಇದ್ದಲ್ಲಿ ನನ್ನ ಗಮನಕ್ಕೆ ತಂದು ಬಗೆಹರಿಸಿಕೊಳ್ಳಬೇಕಾಗಿ ವಿನಂತಿ.

IF UNDELIVERED PLEASE RETURN TO SENDER

Published for K.S.S.T.A. by K. Narahari
# 55, Yadavasmruthi, 1st Main, Sheshadripuram,
Bangalore - 560 020. ✆ : 080-23466495
Printed at : RASHTROTTHANA MUDRANALAYA, Bangalore - 560 019.

ಶಿಕ್ಷಕ ಸಮಾಚಾರ ತರಿಸಲು ಇಲಾಖೆಯ ಆದೇಶ

D.P.I. (Special) ಅವರ ಆದೇಶ ಸಂಖ್ಯೆ T3-LBS-RKM-7/79-80 ದಿನಾಂಕ 20–6–1980ರ ಪ್ರಕಾರ ರಾಜ್ಯದ ಎಲ್ಲಾ ಪ್ರಾಥಮಿಕ ಶಾಲೆಗಳು, ಹೈಸ್ಕೂಲುಗಳು, ಜ್ಯೂನಿಯರ್ ಕಾಲೇಜುಗಳು ಮತ್ತು ಶಿಕ್ಷಕರ ತರಬೇತಿ ಸಂಸ್ಥೆಗಳು (I.T.I.) ತಮ್ಮ ವಾಚನಾಲಯ ಅಥವಾ ಪುಸ್ತಕಾಲು ನಿಧಿಯಿಂದ 'ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ' ಚಂದಾ ಪಾವತಿ ಮಾಡಬಹುದು

srushtidesigns@gmail.com